ಜನಪದ ಸೇವಕ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ಆಗಸ್ಟ್ - ೨೦೧೫ ಸಂಚಿಕೆ - ೧

ರೈತರ ಆತ್ಮಹತ್ಯೆ ಮತ್ತು ಜನಪದ

*

ಸಂಪೂರ್ಣ ಕ್ರಾಂತಿಗಾಗಿ ದೂರ ಬಹುದೂರ ನಡೆಯುವುದಿದೆ

*

ಅಭಿವೃದ್ಧಿಯ ಹೆಸರಲ್ಲಿ ಹಸ್ತಕ್ಷೇಪ

*

ಸ್ವಚ್ಛತಾ ಅಭಿಯಾನ ಮತ್ತು ಗಾಂಧಿ

ದೇಶದ ಕೃಷಿಗೆ ಕ್ಷಯರೋಗ ತಗುಲಿದೆ. ರೋಗದ ನಿವಾರಣೆಗೆ ಸರ್ಕಾರ ಮಾಡುತ್ತಿರುವ ಪ್ರಯತ್ನಗಳು ಬಾಹ್ಯರೂಪದ್ದಾಗಿವೆ. ಗ್ರಾಮಗಳಲ್ಲಿ ದ್ದುಕೊಂಡು ಕೃಷಿಯಲ್ಲಿ ತೊಡಗಿರುವ ಸಮುದಾಯವೆ ರೈತರ ಬವಣೆಗೆ ಪರಿಹಾರ ಕಂಡುಹಿಡಿದು ಆ ನಿಟ್ಟಿನತ್ತ ಪ್ರಯತ್ನಿಸುವಂತೆ ಮಾಡುವುದೇ ರೈತರ ಆತ್ಮಹತ್ಯೆಯ ಕಾರಣದ ನಿವಾರಣೆಗೆ ಸರಿಯಾದ ಮಾರ್ಗವೆಂದು ಈ ಲೇಖನ ಪ್ರತಿಪಾದಿಸುತ್ತದೆ.

ತುರ್ತು ಪರಿಸ್ಥಿತಿಯ ವಿರುದ್ಧ ೧೯೭೫ ಜೂನ್ ತಿಂಗಳಲ್ಲಿ ಜಯಪ್ರಕಾಶ್ ನಾರಾಯಣ್ ಮಾಡಿದ್ದ ಭಾಷಣದ ಮೊದಲನೆಯ ಭಾಗ ಈ ಲೇಖನ

ಅಭಿವೃದ್ಧಿಯ ನೆಪದಲ್ಲಿ ಪ್ರಕೃತಿ ಹೇಗೆ ಹಾಳಾಗುತ್ತಿದೆ ಎಂಬುದನ್ನು ತಿಳಿಸುವುದು ಈ ಲೇಖನದ ಉದ್ದೇಶ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಆಗಸ್ಟ್ - ೨೦೧೫
ಸಂಪುಟ - ೧೬
ಸಂಚಿಕೆ - ೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಅಂತಕನ ದೂತರಿಗೆ

ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ
ಚಿಂತೆಯನು ಬಿಟ್ಟು ಶ್ರೀಹರಿಯ ನೆನೆಮನವೆ
ದಿವರಾತ್ರಿಯೆನ್ನದೆ ವಿಷಯಲಂಪಟನಾಗಿ
ಸವಿಯೂಟಗಳನ್ನುಂಡು ಭ್ರಮಿಸಬೇಡ
ಅವನ ಕೊಂದಿವನ ಕೊಂದರ್ಥವನುಗಳಿಸುವರೆ
ಜವನ ದೂತರು ಬರುವ ಹೊತ್ತ ನೀನರಿಯೆ
ಮೊನ್ನೆ ಮದುವೆವಾದೆನ್ನೈ ಕರೆವುಒಂದೆರವೆಮ್ಮ
ನಿನ್ನೆ ಕೊಂಡೆನು ಕ್ಷೇತ್ರ ಫಲವು
ಬಹುದು ಹೊನ್ನು ಹಣವುಂಟೆನಗೆ
ಸಾಯಲಾರೆನು ಎನಲು
ಬೆನ್ನುಬಿಡುವಳೆ ಮೃತ್ಯು ವ್ಯರ್ಥಜೀವಾತ್ಮ
ಹೊಸಮನೆಯ ಕಟ್ಟಿದೆನು
ಗೃಹಶಾಂತಿ ಮನೆಯೊಳಗೆ
ಬಸಿರಿ ಹೆಂಡತಿ ಮಗನ ಮದುವೆ ನಾಳೆ
ಹಸನಾಗಿ ಇದೆ ಬದುಕು
ಸಾಯಲಾರೆನು ಎನಲು
ಕುಸುರಿದರಿಯದೆ ಬಿಡರು ಯಮನವರು ಆಗ
ಪುತ್ರ ಹುಟ್ಟಿದ ದಿವಸ ಹಾಲಿನೂಟದ ಹಬ್ಬ
ಮತ್ತೊಬ್ಬ ಮಗನ ಉಪನಯನ ನಾಳೆ
ಅರ್ತಿಯಾಗಿದೆ ಬದುಕು
ಸಾಯಲಾರೆನು ಎನಲು
ಮೃತ್ಯು ಹೆಡತಲೆಯಲ್ಲಿ ನಗುತಿರ್ಪಳಯ್ಯ
ಅಟ್ಟಡುಗೆ ಉಣಲಿಲ್ಲ ಇಷ್ಟದರುಶನವಿಲ್ಲ
ಕೊಟ್ಟ ಸಾಲವ ಕೇಳ್ವ ಹೊತ್ತನರಿಯೆ
ಕಟ್ಟೆತುಂಬಿದ ಮೇಲೆ ಕ್ಷಣಮಾತ್ರ ಇರಲಿಲ್ಲ
ಅಷ್ಟರೊಳು ಪುರಂದರ ವಿಠಲನೆನು ಮನವೆ

– ಪುರಂದರ ದಾಸರು

ಚಿಂತನೆಗೊಂದು ಸಂಗತಿ

ಅಕ್ರಮವಾದುದನ್ನು ಸಕ್ರಮಗೊಳಿಸುವುದು ಸರ್ಕಾರದ ಒಂದು ಚಾಳಿಯೇ ಆಗಿದೆ; ಹವ್ಯಾಸವೂ ಆಗಿದೆ. ಕಾಡಿನ ಅಂಚಿನಲ್ಲಿ ಅಕ್ರಮವಾಗಿ ವ್ಯವಸಾಯಮಾಡುವುದಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ. ಕೆಲಸಮಯದ ನಂತರ ಅಕ್ರಮವಾಗಿ ಸಾಗುವಳಿಮಾಡುತ್ತಿದ್ದೀರೆಂದು ರೈತರನ್ನು ಅಲ್ಲಿಂದ ಉಚ್ಚಾಟಿಸುವ ಕ್ರಮಕ್ಕೆ ಸರ್ಕಾರ ಮುಂದಾಗುತ್ತದೆ. ಸಾಗುವಳಿ ಮಾಡುತ್ತಿರುವ ರೈತರು ಸಂಘಟಿತರಾಗಿ ಆ ಪ್ರದೇಶವನ್ನು ಬಿಟ್ಟುಕೊಡುವುದಿಲ್ಲವೆಂದು ಹೋರಾಟ ನಡೆಸುತ್ತಾರೆ. ಅಧಿಕಾರಿಗಳ ಕಿರುಕುಳ ಹೆಚ್ಚಾಗುತ್ತದೆ. ಆಗ ರೈತರು ಸ್ಥಳೀಯ ಶಾಸಕನನ್ನು ಹಿಡಿದು ತಮ್ಮ ಹೋರಾಟವನ್ನು ಮುಂದುವರೆಸುತ್ತಾರೆ. ಸ್ಥಳೀಯ ಶಾಸಕ ತನ್ನ ಮತ ಬ್ಯಾಂಕನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಲು ರೈತರ ಪರವಾಗಿ ಸರ್ಕಾರದಲ್ಲಿ ವಾದಿಸುತ್ತಾನೆ. ಆಡಳಿತದಲ್ಲಿರುವ ಸರ್ಕಾರಕ್ಕೆ ಶಾಸಕನ ಬೆಂಬಲ ಬೇಕಾಗಿರುವುದರಿಂದ ಅವನ ಮಾತಿಗೆ ಮನ್ನಣೆ ಕೊಟ್ಟು ಕಾಡಿನಲ್ಲಾದ ಅಕ್ರಮ ಸಾಗುವಳಿಯನ್ನು ಸರ್ಕಾರ ಸಕ್ರಮಗೊಳಿಸುತ್ತದೆ. ಇಂಥದೆ ಕ್ರಮ ನಗರಗಳ ಬಡಾವಣೆಯಲ್ಲಿ ಅಕ್ರಮವಾಗಿ ಕಟ್ಟಲ್ಪಟ್ಟ ಮನೆಗಳು ಸಕ್ರಮಗೊಳ್ಳುತ್ತವೆ. ಕನ್ನಡ ಮಾಧ್ಯಮದ ಶಾಲೆಗೆ ಅನುಮತಿ ಪಡೆದು ಮಕ್ಕಳಿಗೆ ಇಂಗ್ಲೀಷ್ ಬೋಧಿಸುವ ಶಾಲೆಗಳು ಅಕ್ರಮವಾಗಿ ನಿಯಮವನ್ನು ಉಲ್ಲಂಘಿಸುತ್ತಿದ್ದರೂ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಪ್ರಭಾವಕ್ಕೆ ಸೋತು ಆ ಅಕ್ರಮ ಶಾಲೆಗಳನ್ನು ಸರ್ಕಾರ ಸಕ್ರಮಗೊಳಿಸುತ್ತದೆ. ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದ ಪಂಪ್‌ಸೆಟ್ ಮಾಲೀಕರು ವ್ಯವಸಾಯದ ಕಾರಣಗಳನ್ನು ಕೊಟ್ಟು 'ಅನ್ನದಾತನೆಂಬ' ಕಾರಣಕ್ಕಾಗಿ ಸರ್ಕಾರ ಅವರ ಅಕ್ರಮ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸುತ್ತದೆ. ಶಿಕ್ಷಣ ಸಂಸ್ಥೆಗಳು ನಡೆಸುವ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸುವ ವಿದ್ಯಾರ್ಥಿಗಳಿಗೆ ಒಳ್ಳೆಯ ಭವಿಷ್ಯ ಇರುವುದೆಂಬ ಕಾರಣಕ್ಕಾಗಿ ವಿದ್ಯಾರ್ಥಿಗಳ ಪೋಷಕರು ಕಟ್ಟುನಿಟ್ಟಾಗಿ ಪರೀಕ್ಷೆಯನ್ನು ವಿರೋಧಿಸುತ್ತಿರುವುದಲ್ಲದೆ ಕಾಪಿಮಾಡಲು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ರಾಜಕಾರಣಿ ಲಾಲುಪ್ರಸಾದ್‌ಯಾದವ್ ಪರೀಕ್ಷಾ ಕೊಠಡಿಗಳಲ್ಲಿ ಪಠ್ಯಪುಸ್ತಕಗಳನ್ನು ತೆಗೆದುಕೊಂಡು ಹೋಗಲು ಅನುಮತಿ ಕೊಡಬೇಕೆಂದು ಪ್ರತಿಪಾದಿಸಿದ್ದಾರೆ. ಹೀಗೆ ಅಕ್ರಮವನ್ನು ಸಕ್ರಮಗೊಳಿಸುವ ಕ್ಷೇತ್ರಗಳ ಪಟ್ಟಿ ಆಂಜನೇಯನ ಬಾಲದಂತೆ ಬೆಳೆಯುತ್ತಲೇ ಇದೆ. ಅಕ್ರಮ-ಸಕ್ರಮ ಇವೆರಡು ಅವಳಿಪದಗಳಾಗಿವೆ. ಇಂದಿನ ಅಕ್ರಮ ನಾಳಿನ ಸಕ್ರಮ ಎಂಬ ವಿಚಾರ ಸಮಾಜದಲ್ಲಿ ಮಾನ್ಯತೆ ಪಡೆದಿದೆ. ಸಲಿಂಗ ದೈಹಿಕ ಸಂಬಂಧ ನಿಷಿದ್ಧವಾದದ್ದು ಈಗ ಸ್ವೀಕೃತಗೊಂಡಿದೆ. ಸಲಿಂಗ ವಿವಾಹಕ್ಕೆ ಕಾನೂನಿನ ಮನ್ನಣೆ ದೊರೆತಿದೆ. ವೇಶ್ಯಾವಾಟಿಕೆಗಳು ಕ್ರಮಬದ್ಧಗೊಳ್ಳುತ್ತಿವೆ. ಈ ಅಕ್ರಮ-ಸಕ್ರಮದ ಚಕ್ರ ಸಮಾಜದ ಆಧಾರ ಸ್ತಂಭವಾಗಿರುವ ನೈತಿಕ ಮೌಲ್ಯಗಳನ್ನು ಹಾಳುಮಾಡುತ್ತಿಲ್ಲವೇ ಎಂಬುದನ್ನು ಗಮನಿಸಲಾರದಷ್ಟು ಸರ್ಕಾರ ಮತ್ತು ಮತದಾರರು ಕುರುಡರಾಗಿದ್ದಾರೆ. ಇಂಥ ಪ್ರಜಾಪ್ರಭುತ್ವಕ್ಕೆ ಭವಿಷ್ಯವಿದೆಯೇ ಎಂಬುದು ಚಿಂತನೆಯ ಸಂಗತಿ.

ರೈತರ ಆತ್ಮಹತ್ಯೆ ಮತ್ತು ಜನಪದ

– ಸುರೇಂದ್ರ ಕೌಲಗಿ

ದೇಶದ ಎಲ್ಲ ರಾಜ್ಯಗಳಲ್ಲಿ ರೈತರ ಆತ್ಮಹತ್ಯೆ ನಡೆಯುತ್ತಿದೆ. ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಯ ಸರಣಿಯೇ ಪ್ರಾರಂಭವಾಗಿದೆ. ೧೯೯೫ರಿಂದ ೨೦೧೩ರ ಮಧ್ಯಕಾಲದ ಅವಧಿಯಲ್ಲಿ ದೇಶದಲ್ಲಿ ಮೂರುಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಇಪ್ಪತ್ತೈದು ಸಾವಿರ ರೈತರು ಆತ್ಮಹತ್ಯೆಮಾಡಿಕೊಂಡಿದ್ದಾರೆ. ಜೂನ್ ಜುಲೈ ತಿಂಗಳಲ್ಲಿ ಕರ್ನಾಟಕದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಸಂಖ್ಯೆ ೪೦ರಷ್ಟಿದೆ. ಆತ್ಮಹತ್ಯೆ ಮಾಡಿಕೊಂಡ ರೈತರಲ್ಲಿ ಹೆಚ್ಚಿನವರು ಕಬ್ಬು ಬೆಳೆಯುವ ರೈತರಾಗಿದ್ದಾರೆ. ಅವರು ಬೆಳೆದ ಕಬ್ಬಿಗೆ ಸರಿಯಾದ ಬೆಲೆ ದೊರೆಯದೇ ಹತಾಶರಾಗಿ ಸಾಲಗಾರರ ಕಿರುಕುಳದಿಂದ ತಪ್ಪಿಸಿಕೊಳ್ಳಲು ಆತ್ಮಹತ್ಯೆಮಾಡಿಕೊಂಡಿದ್ದಾರೆ. ಕಬ್ಬು ಮತ್ತು ರೈತರ ಆತ್ಮಹತ್ಯೆ ಇವುಗಳ ಮಧ್ಯೆ ಇರುವ ಸಂಬಂಧವನ್ನು ಗಮನಿಸುವಾಗ ೧೮೬೦ರಲ್ಲಿ ದಕ್ಷಿಣ ಆಫ್ರಿಕಾದ ನೇತಾಲ್ ಪ್ರದೇಶದಲ್ಲಿ ಯುರೋಪಿಯನ್ನರಿಗೆ ಕಬ್ಬು ಬೆಳೆಯಲು ಸಹಾಯಕ್ಕಾಗಿ ಹೋದ ಭಾರತೀಯ ಕೂಲಿಗಳ ಕಷ್ಟ ನೆನಪಿಗೆ ಬರುತ್ತದೆ. ಕಬ್ಬು ಬೆಳೆಯುವ ಉದ್ದೇಶದಿಂದ ನೇತಾಲಿಗೆ ಹೋದ ಭಾರತೀಯ ಕೂಲಿಕಾರರು ಎಂಥ ಅಮಾನವೀಯ ಕಷ್ಟಗಳನ್ನು ಎದುರಿಸಬೇಕಾಯಿತು ಮತ್ತು ಅಂಥ ಕಷ್ಟದಿಂದ ಅವರನ್ನು ಮುಕ್ತಗೊಳಿಸಲು ಗಾಂಧೀಜಿ ಹೇಗೆ ಹೋರಾಟಮಾಡಿದರೆಂಬುದು ಇತಿಹಾಸದ ವಿಷಯವಾಗಿದೆ. ಈಗ ಕರ್ನಾಟಕದಲ್ಲಿ ಅದೇ ಕಬ್ಬು ವ್ಯವಸಾಯ ರೈತರನ್ನು ಅವರದೇ ಸರ್ಕಾರ ಮತ್ತು ಸಕ್ಕರೆ ಕಾರ್ಖಾನೆಗಳು ಆತ್ಮಹತ್ಯೆಗೆ ಗುರಿಪಡಿಸುತ್ತಿವೆ. ೧೫೫ವರ್ಷಗಳಾದರೂ ಕಬ್ಬು ಬೆಳೆಗಾರರ ಕಷ್ಟ ತಪ್ಪಲಿಲ್ಲವೆಂಬ ಸಂಗತಿ ರೈತರ ಹಿತವನ್ನು ಬಯಸುವ ಯಾರಿಗಾದರೂ ದುಃಖವಾಗದೆ ಇರುವುದಿಲ್ಲ. ರೈತರ ಆತ್ಮಹತ್ಯೆಗೆ ಕಬ್ಬು ವ್ಯವಸಾಯ ಸಾಂಕೇತಿಕವಾಗಿದೆ. ಬೇರೆ ಪ್ರಕಾರದ ವ್ಯವಸಾಯದಲ್ಲಿ ತೊಡಗಿದ ರೈತರು ಕೂಡ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಒಟ್ಟಾರೆ, ಕೃಷಿ ಕ್ಷೇತ್ರಕ್ಕೇ ಕ್ಷಯ ರೋಗ ಪೀಡಿಸುತ್ತಿರುವಂತೆ ಅನಿಸುತ್ತಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಬಹಳಷ್ಟು ಮತ್ತು ಅಗಾಧವಾದ ಸಂಶೋಧನೆಗಳು ಆಗಿದ್ದರೂ ಯಾವ ರೀತಿ ಕ್ಷಯ ರೋಗದ ನಿವಾರಣೆಗೆ ಸಿದ್ಧೌಷಧ ದೊರೆತಿಲ್ಲವೊ ಹಾಗೆಯೇ ಕೃಷಿಕ್ಷೇತ್ರದಲ್ಲಿ ಅನೇಕಾನೇಕ ಸಂಶೋಧನೆಗಳು ನಡೆದಿದ್ದರೂ, ಯಾಂತ್ರೀಕರಣಗೊಂಡಿದ್ದರೂ,

ಸುಧಾರಿತ ವ್ಯವಸಾಯದ ಬಗ್ಗೆ ಸಾಕಷ್ಟು ಪ್ರಚಾರವಾಗಿದ್ದರೂ, ರಾಷ್ಟ್ರೀಕೃತ ಬ್ಯಾಂಕುಗಳಿಂದಲೂ ಮತ್ತು ಸಹಕಾರಿ ಬ್ಯಾಂಕುಗಳಿಂದಲೂ ರೈತರಿಗೆ ವಿವಿಧ ಬಗೆಯ ಸಾಲ ದೊರೆಯುತ್ತಿದ್ದರೂ ವ್ಯವಸ್ಥಿತ ಮತ್ತು ಆಧುನಿಕ ವ್ಯವಸಾಯೋತ್ಪನ್ನ ಮಾರುಕಟ್ಟೆಗಳ ನಿರ್ಮಾಣವಾಗಿದ್ದರೂ ಕೂಡ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದೊಂದು ಗಂಭೀರವಾದ ಮತ್ತು ಸವಾಲನ್ನು ಎಸೆದಿರುವ ಸಮಸ್ಯೆಯಾಗಿದೆ. ಕೇಂದ್ರಸರ್ಕಾರ ಮತ್ತು ಎಲ್ಲ ರಾಜ್ಯಸರ್ಕಾರಗಳು, ರಾಜಕಾರಣಿಗಳು, ನೀತಿನಿರೂಪಕರು, ಅಧಿಕಾರಿಗಳು ಎಲ್ಲರೂ ರೈತರ ಆತ್ಮಹತ್ಯೆಗೆ ಕಾರಣವಾಗುತ್ತಿರುವ ಕಾರಣಗಳನ್ನು ಪತ್ತೆಮಾಡಬೇಕಿದೆ ಕಾರಣಗಳು ಗೊತ್ತಾದಲ್ಲಿ ಅವುಗಳ ಪರಿಹಾರಕ್ಕೆ ಸಮರೋಪಾದಿಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕಿದೆ. ಸರ್ಕಾರ ಮತ್ತು ರಾಜಕಾರಣಿಗಳು ಗ್ರಾಮಸ್ಥರನ್ನು ಎಲ್ಲ ವಿಷಯಗಳಲ್ಲಿ ತಮ್ಮನ್ನೇ ಅವಲಂಬಿಸುವಂಥ ಸಲಹೆಗಳನ್ನು ಕೊಡುವುದನ್ನು ತಕ್ಷಣ ನಿಲ್ಲಿಸಬೇಕು. ತಮ್ಮ ಕಾಲಮೇಲೆ ನಿಂತುಕೊಳ್ಳುವಂತೆ ಪ್ರೋತ್ಸಾಹಿಸಬೇಕು.

ರೈತರ ಆತ್ಮಹತ್ಯೆಯ ಪ್ರಕರಣಗಳಿಗೆ ಸರ್ಕಾರದ ನೀತಿಯಲ್ಲಿಯ ಲೋಪದೋಷಗಳು ಕಾರಣವೆಂದು ಹೇಳಲಾಗುತ್ತಿದೆ. ರಾಷ್ಟ್ರೀಕೃತ ಬ್ಯಾಂಕುಗಳು ನೀಡಿರುವ ಸಾಲಗಳು ಮತ್ತು ಖಾಸಗಿ ಬ್ಯಾಂಕಿನವರು ನೀಡುತ್ತಿರುವ ಸಾಲಗಳು ಹಾಗೂ ಖಾಸಗಿ ಲೇವಾದೇವಿಗಾರರು ಕೊಡಮಾಡುವ ಸಾಲಗಳು ಆತ್ಮಹತ್ಯೆಗೆ ಪ್ರಧಾನ ಕಾರಣವೆಂದು ಹೇಳಲಾಗುತ್ತಿದೆ. ರೈತರು ಬೆಳೆಯುವ ಬೆಳೆಗಳಿಗೆ ಮತ್ತು ತರಕಾರಿಗಳಿಗೆ ಲೆಕ್ಕಾಚಾರಾಧಾರಿತ ವೈಜ್ಞಾನಿಕ ಬೆಲೆ ಸಿಗದೆಇರುವ ಕಾರಣವು ಕೂಡ ಆತ್ಮಹತ್ಯೆಗೆ ಕಾರಣವೆಂದು ಹೇಳಲಾಗುತ್ತಿದೆ. ವಿದ್ಯುತ್‌ಶಕ್ತಿಯ ಪೂರೈಕೆಯಲ್ಲಿಯ ವ್ಯತ್ಯಯಗಳು, ಕಳಪೆ ಬೀಜಗಳ ಪೂರೈಕೆಯು ಮತ್ತು ರೈತರು ಉಪಯೋಗಿಸುವ ವಿವಿಧ ಪ್ರಕಾರದ ಯಂತ್ರೋಪಕರಣಗಳು ಆಗಾಗ್ಗೆ ಕೆಟ್ಟು ಅವುಗಳನ್ನು ಸುಸ್ಥಿತಿಗೆ ತರುವುದಕ್ಕೆ ಆಗುವ ಖರ್ಚು ಮತ್ತು ಸಮಯ ನಷ್ಟಕೂಡ ಬಹುಮಟ್ಟಿಗೆ ಕಾರಣವೆಂದೂ ಹೇಳಲಾಗುತ್ತಿದೆ.

ಮೇಲ್ಕಾಣಿಸಿದ ವಿವಿಧ ಬಗೆಯ ಕಾರಣಗಳನ್ನು ಗಮನಿಸಿದಾಗ ಕಂಡು ಬರುವ ಅಂಶವೇನೆಂದರೆ ರೈತರ ಆತ್ಮಹತ್ಯೆಯ ಪ್ರಕರಣಗಳಲ್ಲಿ ಜನರ ಪಾತ್ರ ಎಳ್ಳಷ್ಟೂ ಇಲ್ಲವೆನ್ನುವುದು! ಸಾಂಘಿಕ ಸಂಸ್ಥೆಗಳೆ ಹೆಚ್ಚಾಗಿ ಕಾರಣವಾಗಿವೆಯೆಂದು ಅನಿಸುತ್ತದೆ.

ವ್ಯವಸಾಯ ನಡೆಯುವುದು ಗ್ರಾಮಗಳಲ್ಲಿ. ವ್ಯವಸಾಯಮಾಡುವ ರೈತರು ಇರುವುದು ಗ್ರಾಮಗಳಲ್ಲಿ. ಗ್ರಾಮಗಳೆ ವ್ಯವಸಾಯದ ಕೇಂದ್ರಬಿಂದು ಮತ್ತು ರೈತರೆ ಪ್ರಧಾನ ಪಾತ್ರದಾರಿಗಳು. ವ್ಯವಸಾಯ ಮತ್ತು ರೈತರು ಹಾಗೂ ಅವರ ಜೀವನದೊಂದಿಗೆ ಬೆಳೆದುಕೊಂಡು ಬಂದಿರುವ ದೀರ್ಘ ಕಾಲದ ಸಂಸ್ಕೃತಿ ಎಲ್ಲವೂ ಸೇರಿ ಜನಪದವಾಗುತ್ತದೆ. ಕೂಡಿ ಇರುವಿಕೆ, ಪರಸ್ಪರ ಸಹಕಾರ ಮತ್ತು ಪರಸ್ಪರರ ಸುಖ

ದುಃಖಗಳಲ್ಲಿ ಪಾಲ್ಗೊಳ್ಳುವಿಕೆ ಜನಪದದ ಮುಖ್ಯ ಲಕ್ಷಣವಾಗಿರುತ್ತದೆ. ಜೀವನಾವಶ್ಯಕವಾದ ಎಲ್ಲ ವಸ್ತುಗಳಲ್ಲಿ ಸ್ವಾವಲಂಬನೆ ಹೊಂದಿರುವುದು ಜನಪದದ ಬೆನ್ನುಮೂಳೆಯಾಗಿದೆ. ತನ್ನ ಮಕ್ಕಳಿಗೆ ತನ್ನ ಜೀವನಶೈಲಿಗೆ ಅನುರೂಪವಾದ ಶಿಕ್ಷಣವನ್ನು ಕೊಡುವುದು ಜೀವಂತ ಜನಪದದ ಲಕ್ಷಣವಾಗಿದೆ.

ಜಾಗತೀಕರಣ, ಮತ್ತು ಕೈಗಾರಿಕೀಕರಣ ಜೀವನದ ಎಲ್ಲ ಚಟುವಟಿಕೆಗಳನ್ನು ವಾಣಿಜ್ಯೀಕರಣಗೊಳಿಸಿವೆ. ಹೀಗೆ ವಾಣಿಜ್ಯೀಕರಣಗೊಂಡ ವಿಷಯಗಳಲ್ಲಿ ಅನ್ನ ಮತ್ತು ಶಿಕ್ಷಣ ಮುಖ್ಯವಾಗಿವೆ. ಆದ್ದರಿಂದ ಅನ್ನ ಬೆಳೆಯುವ ಗ್ರಾಮಗಳು, ಕಾಯಕಮಾಡುವ ಮಣ್ಣಿನ ಮಕ್ಕಳ ಗ್ರಾಮಗಳು ಒಟ್ಟು ಒಂದು ಜನಪದವಾಗದೆ ಪರಸ್ಪರ ವಿರೋಧಾಸಕ್ತಿಗಳನ್ನು ಹೊಂದಿರುವ ಮತ್ತು ವಾಣಿಜ್ಯ ವ್ಯವಹಾರದ ಮುಖ್ಯ ಧಾತುವಾದ ಹಣದ ಮೋಹಕ್ಕೆ ಸಿಕ್ಕ ಜನರು ವಾಸಿಸುವ ಸಮೂಹಗಳಾಗಿವೆ. ಪರಿಣಾಮವಾಗಿ ಗ್ರಾಮಗಳಲ್ಲಿರುವ ಜನರಲ್ಲಿ ಪರಸ್ಪರರ ಸಹಕಾರ ಕಡಿಮೆಯಾಗಿದೆ. ಸುಖ ದುಃಖಗಳನ್ನು ಹಂಚಿಕೊಳ್ಳುವ ಮನೋಭಾವ ಕಡಿಮೆಯಾಗಿದೆ. ಎಲ್ಲರನ್ನೂ ಕೂಡಿಡುವ ಸಾಂಸ್ಕೃತಿಕ ಬೇರುಗಳು ಒಣಗುತ್ತಿವೆ. ಸಂಸ್ಕೃತಿಯ ಸ್ಥಾನವನ್ನು ಮೂಢನಂಬಿಕೆಗಳು ಆವರಿಸಿಕೊಳ್ಳುತ್ತಿವೆ. ಒಬ್ಬ ದೇವನ ಬದಲಾಗಿ ನೂರಾರು ದೇವರುಗಳು ಜನರ ಮಾನಸವನ್ನು ಆಳುತ್ತಿವೆ. ಕೃಷಿಗೆ ಪೂರಕವಾಗಿದ್ದ ಗೋವುಗಳ ತಾಣದಲ್ಲಿ ಟಿವಿ ಮತ್ತು ಡೈನಿಂಗ್ ಟೇಬಲ್‌ಗಳು ಬಂದಿವೆ. ಮಳೆ ನೀರು ಕುಯ್ಲಿಗೆ ಸಹಕಾರಿಯಾಗಿದ್ದ ತೊಟ್ಟಿ ಮನೆಗಳು ಸಿಮೆಂಟ್, ಕಬ್ಬಿಣ ಕಟ್ಟಡಗಳಾಗಿ ಪರಿವರ್ತಿತಗೊಂಡಿವೆ. ದೇಸೀ ಭಾಷೆಯ ಮತ್ತು ವ್ಯವಹಾರ ಕಲಿಸುತ್ತಿದ್ದ ಜಗುಲಿ ಶಾಲೆಗಳು ವಿದೇಶೀ ಭಾಷೆ ಕಲಿಸುವ, ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ಚಿಂತನೆ ಬಿತ್ತರಿಸುವ ಕಾನ್ವೆಂಟ್ ಶಾಲೆಗಳಾಗಿ ಅವತಾರತಾಳಿವೆ.

ಸಮೂಹ ಭಾವನೆ ಆಗಲಿ, ಕೌಟುಂಬಿಕ ಭಾವನೆ ಆಗಲಿ ಇಲ್ಲದ ಸ್ಥಳಗಳು ಆತ್ಮಹತ್ಯೆಗಳಿಗೆ ಕಾರಣವಾಗುತ್ತದೆ. ವ್ಯಕ್ತಿಯ ಕಷ್ಟ ಸುಖಗಳನ್ನು ಕೇಳಿಕೊಳ್ಳುವ, ಆಪ್ತ ಸಲಹೆಕೊಡುವ ಮತ್ತು ಧೈರ್ಯಕೊಡುವುದಕ್ಕೆ ಯಾರು ಇಲ್ಲದಾಗ ಕಷ್ಟಕ್ಕೆ ಸಿಕ್ಕಿಹಾಕಿಕೊಂಡ ವ್ಯಕ್ತಿ ಹತಾಶನಾಗುತ್ತಾನೆ. ಕೊನೆಗೆ ಆತ್ಮಹತ್ಯೆಗೆ ಶರಣಾಗುತ್ತಾನೆ. ಈ ಸಂಗತಿ ವಿಶೇಷವಾಗಿ ಕೃಷಿಕರಿಗೆ ಅನ್ವಯಿಸುತ್ತದೆ. ಭಾರತದ ಕೃಷಿ ಮಳೆಯೊಂದಿಗೆ ಜೂಜಾಟ ಎಂಬುದು ಎಲ್ಲರಿಗೂ ಗೊತ್ತಿದೆ. ಜೂಜಾಟದಲ್ಲಿ ಸಾಲವಾಗುತ್ತದೆ, ಮಾನ-ಮರ್ಯಾದೆಗಳ ಹರಾಜಾಗುತ್ತದೆ. ಕುಟುಂಬ ಜೀವನವೆ ಅಸ್ತವ್ಯಸ್ತಗೊಳ್ಳುತ್ತದೆ. ಜೂಜಾಟದಂತಿರುವ ಕೃಷಿಯನ್ನೆ ನಂಬಿರುವ ರೈತರಲ್ಲಿ ಆತ್ಮಹತ್ಯೆಗಳು ಹೆಚ್ಚಾಗಿ ಆಗುತ್ತಿರುವುದು. ಕುಟುಂಬದ ನಿರ್ವಹಣೆಗಾಗಿ ಸಾಲಮಾಡಿ ಕೃಷಿಮಾಡಿದ ರೈತನ ಸಾಲದ ತೀರುವಳಿಗಾಗಿ ಅವನ ಕುಟುಂಬ ಪೂರ್ಣ ಪ್ರಮಾಣದಲ್ಲಿ ಸಹಕರಿಸಿದರೆ ಅವನು ಆತ್ಮಹತ್ಯೆಮಾಡಿಕೊಳ್ಳುವ

ನಿರ್ಧಾರಮಾಡುವುದಿಲ್ಲ. ಒಂದು ವೇಳೆ ಆತ ಕೃಷಿಯೇತರ ಕಾರಣಗಳಿಗಾಗಿ ಸಾಲಮಾಡಿದ್ದರೆ ಅವನ ಕುಟುಂಬವು ಅವನನ್ನು ಸರಿದಾರಿಗೆ ತರಲು ಪ್ರಯತ್ನಿಸುವುದು.

ಇದೇ ಸೂತ್ರ ಜನಪದಕ್ಕೂ ಅನ್ವಯಿಸುತ್ತದೆ. ಜನಪದದಲ್ಲಿರುವ ಪ್ರತಿಯೊಬ್ಬ ರೈತನ ಕಷ್ಟ ಸುಖಗಳನ್ನು ಎಲ್ಲರೂ ಆಲಿಸುತ್ತಾರೆ. ಅವರೆಲ್ಲರೂ ಮೂಲತಃ ವ್ಯವಸಾಯಗಾರರೇ ಆಗಿರುವುದರಿಂದ ವ್ಯವಸಾಯಕ್ಕಾಗುವ ಖರ್ಚು ವೆಚ್ಚಗಳನ್ನು ಮತ್ತು ಆದಾಯ-ನಷ್ಟಗಳನ್ನು ಚೆನ್ನಾಗಿ ಬಲ್ಲವರಾಗಿರುತ್ತಾರೆ. ಆಗಾಗ್ಗೆ ನಡೆಯುವ ಜನಪದದ ಸಮೂಹ ಸಭೆಯಲ್ಲಿ ರೈತರು ಮಾಡಿರಬಹುದಾದ ಸಾಲ ಮತ್ತು ಇತರ ಕಷ್ಟ ಕಾರ್ಪಣ್ಯಗಳು ಮುನ್ನೆಲೆಗೆ ಬರುತ್ತದೆ. ಖಾಸಗಿಯಾಗಿ ಯಾವ ಮಹತ್ವದ ವಿಷಯವೂ ಗೌಪ್ಯವಾಗಿ ಉಳಿಯುವುದಿಲ್ಲ. ಆಗ ಎಲ್ಲರೂ ಸೇರಿ ರೈತರ ಸಾಲ ಮತ್ತು ಕಷ್ಟಕಾರ್ಪಣ್ಯಗಳು ಇಡೀ ಸಮುದಾಯದ ಸಾಲವೆಂದೂ, ಕಷ್ಟಕಾರ್ಪಣ್ಯಗಳು ಸಮುದಾಯದ ಕಷ್ಟಕಾರ್ಪಣ್ಯಗಳೆಂದೂ ಅಂಗೀಕರಿಸಲಾಗುತ್ತದೆ. ಸಾಲಗಾರರನ್ನು ಸಭೆಗೆ ಕರೆಸಿ ಪ್ರತಿಯೋರ್ವ ರೈತನ ಸಾಲದ ತೀರುವಳಿಗೆ ಜನಪದ ಆಧಾರವಾಗಿ ನಿಲ್ಲುತ್ತದೆ. ತಮ್ಮೆಲ್ಲರಲ್ಲಿರುವ ದುಡಿಮೆಯ ಶಕ್ತಿ, ಬುದ್ಧಿಶಕ್ತಿ ಮತ್ತು ಎಲ್ಲ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿ ಅವರ ಸಾಲವನ್ನು ತೀರಿಸುವ ಭರವಸೆಯನ್ನು ಸಾಲಗಾರರಿಗೆ ನೀಡುತ್ತದೆ. ಸಕಲ ಉತ್ಪಾದನೆಗಳಿಗೆ ಮೂಲ ಸಾಧನವಾದ ಭೂಮಿ ತಮ್ಮ ಬಳಿ ಇರುವುದರಿಂದ ಅದರ ಮೇಲೆ ದುಡಿದು ಸಾಲವನ್ನು ತೀರಿಸುವುದು ಅಸಾಧ್ಯವಲ್ಲವೆಂಬ ಮಾತನ್ನು ಸಾಲಗಾರರಿಗೆ ಮನದಟ್ಟುಮಾಡಿಕೊಟ್ಟು ತಮ್ಮ ಗ್ರಾಮದ ಎಲ್ಲ ರೈತರನ್ನು ಎಲ್ಲ ಬಗೆಯ ಸಾಲದಿಂದ ಒಂದೇ ನಿಮಿಷದಲ್ಲಿ ಜನಪದ ಸಾಲಮುಕ್ತ ಮಾಡುವುದು! ಇಂಥಹ ಸಶಕ್ತ ಜನಪದವನ್ನು ಗ್ರಾಮಗಳಲ್ಲಿ ತುರ್ತಾಗಿ ಸೃಷ್ಟಿಸುವ ಕೆಲಸವನ್ನು ಎಲ್ಲರೂ ಮಾಡಬೇಕಿದೆ. ಅದರ ಮೂಲಕ ರೈತರ ಆತ್ಮಹತ್ಯೆ ತಡೆಯುವ ಪ್ರಬುದ್ಧ ಉಪಕ್ರಮ ಕೈಗೊಳ್ಳಬೇಕಿದೆ. ಸರ್ಕಾರಗಳ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಅವು ಅಲ್ಲಸಲ್ಲದ ಅಭಿವೃದ್ಧಿಯ ನೆಪದಿಂದ ಗ್ರಾಮಗಳನ್ನು ಕುರುಕ್ಷೇತ್ರವನ್ನಾಗಿಸಿವೆ. ಇತ್ತೀಚೆಗೆ ಅಸ್ತಿತ್ವಕ್ಕೆ ಬಂದ ಗ್ರಾಮಪಂಚಾಯಿತಿಗಳು ಗ್ರಾಮ ಸಮುದಾಯವನ್ನು ಒಡೆಯಲು ಕಾರಣವಾಗಿದೆ. ಗ್ರಾಮ ಸ್ವರಾಜ್ಯದ ಮೂಲಕ ರಾಮರಾಜ್ಯ ಕಟ್ಟಬೇಕೆಂದಿದ್ದ ಗಾಂಧೀಜಿಯವರ ಕನಸನ್ನು ನುಚ್ಚುನೂರಾಗಿಸಿವೆ.

ರೈತ ಸಾಲದಿಂದ ಪಾರಾಗಲು ಸಮಗ್ರ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಇತ್ಯಾದಿಗಳನ್ನು ಅಳವಡಿಸಿಕೊಳ್ಳಬೇಕೆಂದು ರೈತರಿಗೆ ಹೇಳಲಾಗುತ್ತಿದೆ. ಸಾವಯವ ಕೃಷಿಮಾಡಲು ಪ್ರೋತ್ಸಾಹಿಸಲಾಗುತ್ತಿದೆ. ಆದರೆ ಕೃಷಿಯ ಆದಾಯದೊಂದಿಗೆ ಬಿಡುವಿನ ಕಾಲದಲ್ಲಿ ಆದಾಯ ತಂದುಕೊಡುವ ಗ್ರಾಮೋದ್ಯೋಗಗಳಲ್ಲಿ ತೊಡಗುವಂತೆ ಯಾವ ಸಲಹೆಯನ್ನು, ಮಾರ್ಗದರ್ಶನವನ್ನು ಕೊಡಲಾಗುತ್ತಿಲ್ಲ. ಕೃಷಿಕರ ಬಹಳಷ್ಟು ಸಮಯ

ವ್ಯರ್ಥವಾಗಿ ಕಳೆದುಹೋಗುತ್ತದೆ. ದುಶ್ಚಟಗಳ ಅಭ್ಯಾಸಕ್ಕೆ ಕಾರಣವಾಗುತ್ತಿದೆ. ಗ್ರಾಮದ ಜನರಿಗೆ ಬೇಕಾಗುವ ಅನೇಕ ಜೀವನಾವಶ್ಯಕ ವಸ್ತುಗಳನ್ನು ಗ್ರಾಮಗಳಲ್ಲಿಯೇ ವಿವಿಧ ಉದ್ಯೋಗಗಳ ಮೂಲಕ ತಯಾರಿಸಬಹುದಾಗಿದೆ. ತನ್ಮೂಲಕ ಗ್ರಾಮದ ಯುವಕರಿಗೆ ಸ್ಥಳದಲ್ಲಿಯೇ ಉದ್ಯೋಗ ಕೊಡಬಹುದಾಗಿದೆ. ನಿರುದ್ಯೋಗ ಇಲ್ಲದಂತೆ ಮಾಡಬಹುದಾಗಿದೆ, ಜನಪದದಲ್ಲಿಯ ಇಡೀ ಮಾನವಶಕ್ತಿಯ, ಬುದ್ಧಿಶಕ್ತಿಯ ಉಪಯೋಗವಾಗುವಂತೆ ಮಾಡಬಹುದಾಗಿದೆ. ಸೋಪು, ಎಣ್ಣೆ, ಪಾತ್ರೆ, ಕಂಬಳಿ, ಬಟ್ಟೆ, ಊಟಕ್ಕೆ ಬೇಕಾದ ಉಪ್ಪಿನಕಾಯಿ, ಹಪ್ಪಳ–ಸಂಡಿಗೆಯಂತಹ ಅನೇಕ ಜೀವನಾವಶ್ಯಕ ಪದಾರ್ಥಗಳಿಗಾಗಿ ಗ್ರಾಮಗಳು ಪರಾವಲಂಬಿತವಾಗಿವೆ. ಗ್ರಾಮದ ಹಣ ನಗರಗಳಲ್ಲಿರುವ ಬಹುರಾಷ್ಟ್ರೀಯ ಕಂಪೆನಿಗಳಿಗೆ ಸೇರುತ್ತಿದೆ. ಇಂಥಹ ದುರ್ದೆಸೆ ಎಲ್ಲ ರಾಜಕಾರಣಿಗಳ, ಮಂತ್ರಿಗಳ, ಊರುಗಳಲ್ಲಿಯೂ ಇದೆ. ಇತ್ತೀಚೆಗೆ ಮುಖ್ಯಮಂತ್ರಿಯವರ ಗ್ರಾಮವಾದ ಸಿದ್ಧರಾಮನ ಹುಂಡಿಗೆ ಹೋಗಿದ್ದೆ. ಸುಮಾರು ಐದಾರು ಸಾವಿರ ಜನಸಂಖ್ಯೆಯುಳ್ಳ ಆ ಗ್ರಾಮದಲ್ಲಿ ಒಂದೇ ಒಂದು ಗ್ರಾಮೋದ್ಯೋಗ ಇಲ್ಲವೆಂದು ಗೊತ್ತಾಯಿತು. ಕುರಿ ಸಾಕಣೆಯ ಪ್ರದೇಶವಾಗಿದ್ದರು ಕಂಬಳಿ ತಯಾರಿಕೆಯ ಉದ್ಯೋಗವೂ ಇಲ್ಲ. ಈ ರೀತಿ ಎಲ್ಲ ರೀತಿಯಲ್ಲೂ ಶುಶ್ಕವಾದ ಗ್ರಾಮಗಳಲ್ಲಿಯ ರೈತರು ಆತ್ಮಹತ್ಯೆಗೆ ಶರಣಾಗುವುದಕ್ಕೆ ಕೇವಲ ಸರ್ಕಾರಗಳಷ್ಟೇ ಕಾರಣವಲ್ಲ ಗ್ರಾಮಗಳಲ್ಲಿರುವ ಜನಸಮುದಾಯವೂ ಕಾರಣವಾಗಿದೆ.

ಮಿತ್ರರೆ ಇದು ಸಂಪೂರ್ಣ ಕ್ರಾಂತಿ

ದೂರ ಬಹುದೂರ ನಡೆಯುವುದಿದೆ...

– ಜಯಪ್ರಕಾಶ್ ನಾರಾಯಣ್

(ಈಗ್ಗೆ ೪೧ ವರ್ಷಗಳ ಹಿಂದೆ ೧೯೭೪ ಜೂನ್ ೫ರಂದು ಲೋಕನಾಯಕ ಜಯಪ್ರಕಾಶ್ ನಾರಾಯಣರು ತುರ್ತು ಪರಿಸ್ಥಿತಿಯ ಕಾಲದಲ್ಲಿ ಸಂಪೂರ್ಣ ಕ್ರಾಂತಿಯ ಕಹಳೆ ಊದಿದರು. ಅಂದು ಬಿಹಾರ್ ರಾಜ್ಯದ ರಾಜಧಾನಿ ಪಟನಾ ನಗರದ ಮಧ್ಯ ಭಾಗದಲ್ಲಿರುವ ಗಾಂಧೀ ಮೈದಾನದಲ್ಲಿ ನೆರೆದಿದ್ದ ಅಪಾರವಾದ ಜನಸ್ತೋಮವನ್ನು ಉದ್ದೇಶಿಸಿಮಾಡಿದ ಐತಿಹಾಸಿಕ ಭಾಷಣದ ಕನ್ನಡ ಅನುವಾದವನ್ನು ಇಲ್ಲಿ ಕೊಡಲಾಗಿದೆ. ಅಂದು ಜೆ.ಪಿ.ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಕೊಟ್ಟ ಕರೆ ಇಂದಿಗೂ ಪ್ರಸ್ತುತವಾಗಿದೆ ಎಂಬುದು ಗಮನಾರ್ಹ

– ಸಂ)

ಬಿಹಾರ್ ಪ್ರದೇಶ್ ವಿದ್ಯಾರ್ಥಿ ಸಂಘರ್ಷ ಸಮಿತಿಯ ನನ್ನ ಯುವಕ ಜೊತೆಗಾರರೇ, ಬಿಹಾರ್ ಪ್ರದೇಶದ ಅಸಂಖ್ಯ ನಾಗರೀಕ ಸಹೋದರ ಸಹೋದರಿಯರೇ! ಈಗ ತಾನೇ ರೇಣೂಜಿ ಕವಿತೆ ಓದಿದರು. ಅನೇಕ ನೆನಪುಗಳನ್ನು ಮತ್ತು ಇತ್ತೀಚೆಗಿನ ಬಹು ದುಃಖಪೂರ್ಣ ನೆನಪನ್ನು ನನ್ನಲ್ಲಿ ಹುಟ್ಟಿಸಿದವು. ಇದರಿಂದಾಗಿ ಹೃದಯ ಭಾರವಾಗಿದೆ. ವೆಲ್ಲೂರ್ ಆಸ್ಪತ್ರೆಗೆ ನಾನು ಹೊರಟಾಗ ಮದರಾಸ್‌ನಲ್ಲಿ ಎರಡು ದಿನ ನನ್ನ ಮಿತ್ರ ಶ್ರೀ.ಈಶ್ವರ ಐಯ್ಯರ್‌ರೊಂದಿಗೆ ಉಳಿದಿದ್ದೆ. ಅಲ್ಲಿ ದಿನಕರ್‌ಜಿ, ಗಂಗಾ ಬಾಬು ಭೇಟಿಮಾಡಲು ಬಂದಿದ್ದರು. ದಿನಕರ್‌ಜಿ ಬಹಳ ಸಂತೋಷವಾಗಿ ಇರುವಂತೆ ಕಂಡರು. ಇವರು ಇತ್ತೀಚೆಗೆ ತಮ್ಮ ಕೆಲ ಕವಿತೆಗಳನ್ನು ಓದಿ "ನಿಮ್ಮ ಬಗ್ಗೆ ಏನೆಲ್ಲ ನನ್ನ ಅಪೇಕ್ಷೆಗಳಿದ್ದವೊ ಅವೆಲ್ಲವೂ ನಿಮ್ಮ ಈ ಆಂದೋಲನದಲ್ಲಿ, ದೇಶದ ಯುವಕರಿಗೆ ಕೊಟ್ಟ ಕರೆಯಲ್ಲಿ ಕಾಣುತ್ತಿವೆ." ಎಂದು ಹೇಳಿದರು (ಚಪ್ಪಾಳೆ). ಚಪ್ಪಾಳೆ ಖಂಡಿತ ತಟ್ಟಬೇಡಿ ನನ್ನ ಮಾತನ್ನು ಸದ್ದಿಲ್ಲದೆ ಕೇಳಿ.

ಈಗ ನೀವು ನನ್ನ ಮುಖದಿಂದ ಹುಂಕಾರ ಕೇಳುವುದಿಲ್ಲ. ಆದರೆ ಯಾವ ವಿಚಾರಗಳನ್ನು ನಿಮಗೆ ಹೇಳುತ್ತೇನೋ ಆ ವಿಚಾರ ಹುಂಕಾರದಿಂದ ತುಂಬಿದೆ. ಅವು ಕ್ರಾಂತಿಕಾರಿ ವಿಚಾರಗಳಾಗಿರುವವು. ಅವುಗಳನ್ನು ಜಾರಿಗೆ ತರುವುದು ಸುಲಭವಲ್ಲ. ಜಾರಿ ಮಾಡುವುದಕ್ಕಾಗಿ ಬಲಿದಾನಮಾಡಬೇಕಾಗುವುದು, ಕಷ್ಟಸಹಿಸಬೇಕಾಗುವುದು, ಗುಂಡು ಮತ್ತು ಲಾಠಿಗಳನ್ನು ಎದುರಿಸಬೇಕಾಗುವುದು, ಜೇಲುಗಳನ್ನು ತುಂಬಬೇಕಾಗುವುದು, ಜಮೀನುಗಳ ಹರಾಜುವಾಗುವುದು. ಇದೆಲ್ಲವೂ ಆಗುವುದು.

ಮಿತ್ರರೇ ಇದು ಕ್ರಾಂತಿ. ಅಷ್ಟೇ ಅಲ್ಲ ಇದು ಸಂಪೂರ್ಣ ಕ್ರಾಂತಿ. ಇದು ವಿಧಾನಸಭೆಯ ವಿಘಟನೆಯ ಆಂದೋಲನವಲ್ಲ. ಅದೊಂದು ಹೋಗುವ ದಾರಿಯಲ್ಲಿರುವ ಒಂದು ತಾಣ. ದೂರ ಹೋಗುವುದಿದೆ; ದೂರ ಹೋಗುವುದಿದೆ. ಜವಹರಲಾಲ್ ನೆಹರುರವರ ಶಬ್ದಗಳಲ್ಲಿ ಹೇಳುವುದಾದರೆ ಸ್ವರಾಜ್ಯ ಪ್ರಾಪ್ತಿಗಾಗಿ ಈ ದೇಶದ ಜನತೆ ಎಷ್ಟೋ ಮೈಲಿ ಹೋಗಬೇಕಿದೆ. ಆ ಸ್ವರಾಜ್ಯ ಪ್ರಾಪ್ತಿಗಾಗಿ ದೇಶದ ಸಾವಿರಾರು – ಲಕ್ಷಾಂತರ ಯುವಕರು ಜೀವ ಕಳೆದುಕೊಂಡಿದ್ದಾರೆ. ಅದಕ್ಕಾಗಿ ಸರದಾರ್ ಭಗತ್‌ಸಿಂಗ್, ಅವರ ಜೊತೆಗಾರರು, ಬಂಗಾಲದ ಎಲ್ಲ ಕ್ರಾಂತಿಕಾರಿಗಳು, ಮಹಾರಾಷ್ಟ್ರದ ಯುವಕರು, ದೇಶದೆಲ್ಲೆಡೆಯ ಕ್ರಾಂತಿಕಾರಿ ಮಿತ್ರರು ಗುಂಡಿಗೆ ಗುರಿಯಾದರು. ಅಥವಾ ಗಲ್ಲಿನ ಶಿಕ್ಷೆಗೆ ಒಳಗಾದರು. ಸ್ವರಾಜ್ಯಕ್ಕಾಗಿ ದೇಶದ ಲಕ್ಷಾಂತರ ಜನ ಪದೇ ಪದೇ ಜೇಲುಗಳನ್ನು ತುಂಬುತ್ತಿದ್ದರು. ಆದರೆ ಇಂದು ೭೦-೮೦ ವರ್ಷದ ನಂತರ ಯಾವ ಸ್ವರಾಜ್ಯ ಇದೆಯೊ ಅದರಲ್ಲಿ ಜನತೆ ಒದ್ದಾಡುತ್ತಿದೆ! ಹಸಿವಿದೆ, ಬೆಲೆಗಳೇರಿವೆ, ಭ್ರಷ್ಟಾಚಾರವಿದೆ, ಲಂಚಕೊಡದೆ ಯಾವ ಕೆಲಸವೂ ಆಗುವುದಿಲ್ಲ. ಸರ್ಕಾರಿ ಕಛೇರಿಗಳಲ್ಲಿ, ಬ್ಯಾಂಕುಗಳಲ್ಲಿ, ಎಲ್ಲ ಸ್ಥಳಗಳಲ್ಲಿ, ಟಿಕೇಟ್ ತೆಗೆದುಕೊಳ್ಳುವಲ್ಲಿ, ಎಲ್ಲಿಯೇ ಇರಲಿ ಲಂಚವಿಲ್ಲದೆ ಜನರ ಕೆಲಸವಾಗುವುದಿಲ್ಲ. ಎಲ್ಲ ಪ್ರಕಾರದ ಅನ್ಯಾಯಗಳ ಕೆಳಗೆ ಜನತೆ ಒತ್ತಲ್ಪಡುತ್ತಿದೆ. ಶಿಕ್ಷಣ ಸಂಸ್ಥೆಗಳು ಭ್ರಷ್ಟವಾಗುತ್ತಿವೆ. ಸಾವಿರಾರು ಯುವಕರ ಭವಿಷ್ಯ ಅಂಧಕಾರಮಯವಾಗಿದೆ. ಅವರ ಜೀವನ ನಷ್ಟವಾಗುತ್ತಿದೆ. ಗುಲಾಮರಾಗುವ, ಲೇಖನಿಸವೆಸುವ ಶಿಕ್ಷಣವನ್ನು ಕೊಡಲಾಗುತ್ತಿದೆ. ಶಿಕ್ಷಣ ಪಡೆದ ನಂತರ ನೌಕರಿಗಾಗಿ ಪದೇಪದೇ ಏಟು ತಿನ್ನಬೇಕಾಗುತ್ತದೆ. ನಿರುದ್ಯೋಗ ದಿನೇದಿನೇ ಬೆಳೆಯುತ್ತಿದೆ. ಬಡವರ ನಿರುದ್ಯೋಗ ಹೆಚ್ಚಾಗುತ್ತಿದೆ. "ಬಡತನ ತೊಲಗಿಸಿ" ಎಂಬ ಘೋಷಣೆಗಳನ್ನು ಅವಶ್ಯವಾಗಿ ಕೂಗಲಾಗುತ್ತದೆ. ಆದರೆ ಕಳೆದ ವರ್ಷಗಳಿಂದ ಬಡತನ ಹೆಚ್ಚಾಗಿದೆ. ಭೂಮಿ ಹೀನತೆಯನ್ನು ತೊಲಗಿಸುವುದಕ್ಕಾಗಿ ಸೀಲಿಂಗಿನ ಕಾನೂನು, ಇನ್ನು ಬೇರೆ ಕಾನೂನುಗಳು ರಚಿತವಾಗಿದೆ. ಆದರೆ ಈಗ ಹಿಂದಿಗಿಂತ ಹೆಚ್ಚು ಭೂಮಿಹೀನರಿದ್ದಾರೆ. ಸಣ್ಣ ಸಣ್ಣ ರೈತರ ಜಮೀನನ್ನು ಕಸಿದುಕೊಳ್ಳಲಾಗಿದೆ.

ಮಿತ್ರರೇ ಇಂದು ಈ ಸ್ಥಿತಿಯಿದೆ. ಈ ಸ್ಥಿತಿಯಲ್ಲಿ ದಿನಕರ್‌ರವರು ಮದ್ರಾಸಿನಲ್ಲಿ ಯಾವ ಮಾತುಗಳನ್ನು ನನಗೆ ಹೇಳಿದರೂ ಅವು ಬಹು ಹೃದಯಗ್ರಾಹಿ ಇದ್ದವು. ಆ ದಿನ ರಾತ್ರಿಯೆ ಅವರಿಗೆ ಹೃದಯಾಘಾತವಾಯಿತು. ಮೂರು ನಿಮಿಷದಲ್ಲಿ ಅವರನ್ನು ಆಸ್ಪತ್ರೆಗೆ ರಾಮನಾಥ ಗೋಯಂಕ ತಲುಪಿಸಿದರು. ವಿಲ್ಲಿಂಗ್ಡನ್ ನರ್ಸಿಂಗ್ ಹೋಮ್ ಎಂಬುದು ಅದರ ಹೆಸರು. ಅಲ್ಲಿ ಎಲ್ಲ ವ್ಯವಸ್ಥೆ ಇತ್ತು. ಪಟನಾದ ಆಸ್ಪತ್ರೆಯಲ್ಲಿ ಮೂರು ಘಂಟೆಯಾದರೂ ಅಂಥ ತಯಾರಿ ಆಗುತ್ತಿರಲಿಲ್ಲ. ಎಲ್ಲ ಡಾಕ್ಟರು ಎಲ್ಲ ಪ್ರಕಾರದ ಉಪಕರಣಗಳನ್ನು ತೆಗೆದುಕೊಂಡು ಸಿದ್ಧರಾಗಿದ್ದರು. ಆದರೆ ದಿನಕರ್‌ಜಿಯವರ ಹೃದಯ ಪುನಃ ಸಜೀವಗೊಳ್ಳಲಿಲ್ಲ. ಆ ರಾತ್ರಿ ಅವರ ನಿಧನವಾಯಿತು.

ನನಗೆ ಬಹಳ ನೋವಾಯಿತು. ಅವರ ಕವಿತೆ, ಅವರ ಸುಂದರ, ಸೌಮ್ಯ, ಆದರೆ ಉತ್ಸಾಹಭರಿತ ಮುಖನೆನಪಿಗೆ ಬಂದಿತು. ಈ ಸಂದರ್ಭದಲ್ಲಿ ನನ್ನ ಇಬ್ಬರು ಮಿತ್ರರ ಕೊರತೆ ಬಹಳಷ್ಟು ಬಾಧಿಸಿತು. ಇಂದು ಬೇನಿ ಪುರಿಜಿ ಇದ್ದಿದ್ದರೆ, ಅವರ ಲೇಖನಿಯಲ್ಲಿ ಯಾವ ಶಕ್ತಿಯಿತ್ತೊ ಅದು ಇಂದು ನಡೆದ ಮೆರವಣಿಗೆಯ, ಇಂದಿನ ಈ ಸಭೆಯ ವರ್ಣನೆ ಮಾಡುತ್ತಿತ್ತು. ಅವರ ಒಂದೊಂದು ಶಬ್ದದಲ್ಲಿ ಕಿಡಿ ಇರುತ್ತಿತ್ತು. ದಿನಕರ್‌ಜಿ ಕವಿತೆ ಬರೆದಿದ್ದರೆ ಭಾರತದ ನವ ನಿರ್ಮಾಣಕ್ಕಾಗಿ ದೇಶದ ಯುವಕರು ಮತ್ತು ವಿದ್ಯಾರ್ಥಿಗಳು ಮತ್ತು ದೇಶದ ಸಾಧಾರಣ ವ್ಯಕ್ತಿಗಳ ಮೂಲಕ ಪ್ರಾರಂಭವಾಗುತ್ತಿರುವ ಈ ಹೊಸ ಕ್ರಾಂತಿಯು ಒಂದು ಅಮರ ಸಾಹಿತ್ಯವಾಗುತ್ತಿತ್ತು. ಆದರೆ ಇಂದು ಅವರಿಬ್ಬರೂ ಇಲ್ಲ. ಆದ್ದರಿಂದ ಮಿತ್ತರೇ! ಈ ನೆನಪುಗಳು ಹುಟ್ಟಿಕೊಂಡಿವೆ. ಇವುಗಳ ನೆನಪಿನ ಭಾರ ಹೃದಯದ ಮೇಲಿದೆ. ನಾನು ದಣಿದಿದ್ದೇನೆ. ಆದ್ದರಿಂದ ನಾನು ಗಾಂಧಿ ಗ್ರಂಥಾಲಯಕ್ಕೆ ಹೋಗಿದ್ದೆ. ಡಾ?ರಹಮಾನ್ ಮತ್ತು ಬೇರೆ ಡಾಕ್ಟರರು ನನ್ನ ಪರೀಕ್ಷೆ ಮಾಡಿದರು, ಔಷಧಿ ತೆಗೆದುಕೊಂಡೆ, ವಿಶ್ರಾಂತಿ ತೆಗೆದುಕೊಂಡೆ, ಸ್ವಲ್ಪ ಸಮಯ ಮಲಗಿದೆ. ಎಲ್ಲರೂ ಬಂದಿದ್ದಾರೆಯೇ ಹೇಗೆ ಎಂದು ವಿಚಾರಿಸುತ್ತಿದ್ದೆ. ಸಹೋದರಿಯರು ಮೆರವಣಿಗೆಯಿಂದ ಬಂದಿದ್ದಾರೆಯೇ ಎಂದು ವಿಚಾರಿಸುತ್ತಿದ್ದೆ. ಎಲ್ಲರೂ ಬಂದಿದ್ದಾರೆ ಎಂಬ ಸುದ್ದಿ ಬಂತು. ಆಗ ಜೀಪಲ್ಲಿ ಕುಳಿತು ನಿಮ್ಮ ಸೇವೆಗೆ ಬಂದೆ. ಸ್ವಲ್ಪ ತಡವಾಯಿತು. ಇನ್ನು ಸ್ವಲ್ಪ ತಡವಾಗುವುದು. ಏಕೆಂದರೆ ನಿಮ್ಮೊಂದಿಗೆ ಸ್ವಲ್ಪ ಮಾತಾಡಬೇಕಿದೆ. ನಿರೀಕ್ಷೆಯೊಂದಿಗೆ ನೀವು ಬಂದಿದ್ದೀರಿ. ವಿದ್ಯಾರ್ಥಿಗಳ ನಿರೀಕ್ಷೆಯಿದೆ. ಇಂದಿನ ಈ ವೇದಿಕೆಯಿಂದ ಜಯಪ್ರಕಾಶ್ ನಾರಾಯಣ್ ಕೆಲವು ಹೊಸ ಕಾರ್ಯಕ್ರಮ ಕೊಡುವರೆಂದು. ಮಿತ್ರರೇ ಇದೇನು ನನ್ನ ಕಾರ್ಯಕ್ರಮವಲ್ಲ. ನಾನು ನನ್ನ ವಿದ್ಯಾರ್ಥಿ ಬಂಧುಗಳ ಜೊತೆಗೆ ಚರ್ಚೆಮಾಡಿದೆ. ಸಂಚಾಲನಾ ಸಮಿತಿಯಲ್ಲಿ ಇದರ ಚರ್ಚೆಯಾಯಿತು.ಅವರಲ್ಲಿಯ ಅನೇಕಜನರು ಸಲಹೆ ಬರೆದು ಕಳಿಸಿದರು. ಬುದ್ಧಿಜೀವಿಗಳ ಜೊತೆ ಚರ್ಚೆಯಾಯಿತು. ಆಚಾರ್ಯ ರಾಮುಮೂರ್ತಿಜಿ, ನಾರಾಯಣಭಾಯಿ, ಮನಮೋಹನ್ ಭಾಯಿ, ತ್ರಿಪುರಾರಿ ಶರಣ್ ಈ ನಾಲ್ಕು ಹಿರಿಯ ಜೊತೆಗಾರರಿಗೆ ಜವಾಬ್ದಾರಿ ಕೊಟ್ಟಿದ್ದೆ. ಅವರು ನನ್ನ ವಿಚಾರಗಳನ್ನು ಸರಿಯಾದ ಅರ್ಥದೊಂದಿಗೆ ವಿದ್ಯಾರ್ಥಿಗಳ ಮುಂದೆ ಮಂಡಿಸುವರು. ಚರ್ಚೆಯ ಸಾರವನ್ನು ತೆಗೆದಿದ್ದೇನೆ. ಮತ್ತು ಅದನ್ನು ನಿಮ್ಮ ಮುಂದೆ ಮಂಡಿಸುತ್ತೇನೆ. ವಿವರವಾದ ಪ್ರೋಗ್ರಾಮ್ ಇರುವುದಿಲ್ಲ. ಅದು ಆನಂತರ ಬರುವುದು. ಆಗಾಗ್ಗೆ ವಿವರವಾಗಿ ಯಾವ ತಾರೀಖಿನಿಂದ ಏನು ಮಾಡಬೇಕು ಎಂಬುದನ್ನು ತಿಳಿಸಲಾಗುವುದು. ಆದರೆ ಮುಖ್ಯವಾದ ಮಾತುಗಳನ್ನು ನಿಮ್ಮ ಮುಂದೆ ಇಟ್ಟುಬಿಡುತ್ತೇನೆ. ಬಹಳಷ್ಟು ಕಾರ್ಯಕ್ರಮಗಳನ್ನು ಏಕಕಾಲಕ್ಕೆ ಹೇಳಿದರೆ ನಿಮಗೆ ಜ್ಞಾಪಕವೂ ಇರುವುದಿಲ್ಲ. ಆದ್ದರಿಂದ ಮುಖ್ಯ ಮಾತುಗಳನ್ನು ನಿಮ್ಮ ಎದುರಿಗೆ ಇಂದು ಇಡುವೆ. ಎಂಟು ಮಾತುಗಳನ್ನು

ಹೇಳಲು ಇಷ್ಟಪಡುತ್ತೇನೆ.

ನಾನು ಇದುವರೆಗೆ ಏನನ್ನಾದರೂ ಬರೆದು ಅಥವಾ ಲಿಖಿತ ಟಿಪ್ಪಣಿ ನೋಡಿ ಭಾಷಣ ಮಾಡಿಲ್ಲ. ಮಾತನಾಡಲು ಕುಳಿತುಕೊಳ್ಳುತ್ತೇನೆ, ಏನು ಪ್ರೇರಣೆ ಬರುತ್ತೊ ಅದನ್ನು ಹೇಳಿಬಿಡುತ್ತೇನೆ. ಕೆಲವೊಮ್ಮೆ ಒಳ್ಳೆಯದಾಗುತ್ತದೆ. ಕೆಲವೊಮ್ಮೆ ಶುಷ್ಕವಾಗುತ್ತದೆ. ಆದರೆ ಇಂದು ಬಹುದೊಡ್ಡ ಜವಾಬ್ದಾರಿ ನನ್ನ ಹೆಗಲ ಮೇಲೆ ಬಂದಿದೆ. ಈ ಜವಾಬ್ದಾರಿಯನ್ನು ನಿಮ್ಮಿಂದ ಕೇಳಿ ಪಡೆದಿಲ್ಲ. ತರುಣರಿಗೆ, ವಿದ್ಯಾರ್ಥಿಗಳಿಗೆ ಅನೇಕ ಸಲ ಹೇಳುತ್ತಲೇ ಬಂದಿದ್ದೇನೆ.- "ನಾನು ವೃದ್ಧನಾಗಿದ್ದೇನೆ, ನನ್ನ ಸಲಹೆ ತೆಗೆದುಕೊಳ್ಳಿ. ನೀವು ಹೊಸ ಪೀಳಿಗೆಯ ಜನ. ದೇಶದ ಭವಿಷ್ಯ ನಿಮ್ಮ ಕೈಯಲ್ಲಿದೆ. ನಿಮ್ಮೊಳಗೆ ಉತ್ಸಾಹವಿದೆ, ಶಕ್ತಿಯಿದೆ, ಯೌವನವಿದೆ ನಿಮಗೆ ನೀವೆ ನೇತಾ ಆಗಿರಿ. ನಾ ನಿಮಗೆ ಸಲಹೆ ಕೊಡುವೆ. ಆಗ ವಿದ್ಯಾರ್ಥಿಗಳು ಹೇಳಿದ್ದೇನೆಂದರೆ ಜಯಪ್ರಕಾಶ್‌ಜಿ ಮಾರ್ಗದರ್ಶನದಿಂದ ಕೆಲಸವಾಗುವುದಿಲ್ಲ, ನಾನು ಅದನ್ನು ತಳುತ್ತಾ ಬಂದೆ, ತಳ್ಳುತ್ತಾ ಬಂದೆ. ಆದರೆ ಕೊನೆಯಲ್ಲಿ ವೆಲ್ಲೂರಿಗೆ ಹೋಗುವ ಸಮಯದಲ್ಲಿ ಅವರ ಒತ್ತಾಯಕ್ಕೆ ಮಣಿದೆ ಮತ್ತು ನೇತೃತ್ವವನ್ನು ಸ್ವೀಕರಿಸಿದೆ. ಸ್ವೀಕರಿಸುವ ಸಮಯದಲ್ಲಿ ನನ್ನ ಯೋಗ್ಯತೆಯನ್ನು ತಿಳಿಯಲುಪಕ್ರಮಿಸಿದೆ ಮತ್ತು ನಮ್ರತಾ ಪೂರ್ವಕವಾಗಿ ಸ್ವೀಕರಿಸಿದೆ. ಆದರೆ ವಿದ್ಯಾರ್ಥಿಗಳಲ್ಲಿ, ನಿಮ್ಮಲ್ಲಿ ಕೂಡ ನನ್ನ ವಿನಂತಿ ಏನೆಂದರೆ ನನ್ನನ್ನು ಹೆಸರಿಗೆ ಮಾತ್ರ ನಾಯಕನನ್ನಾಗಿ ಮಾಡಕೂಡದು. ನನ್ನನ್ನು ಎದುರು ಎದುರು ನಿಲ್ಲಿಸಿ ಹಿಂದಿನಿಂದ ಯಾರಾದರೂ ಡಿಕ್ಟೇಟ್ ಮಾಡಿ ಜಯಪ್ರಕಾಶ್ ನಾರಾಯಣ್ ನೀನು ಇದನ್ನು ಮಾಡಬೇಕು. ನಿಮ್ಮ ನೇತೃತ್ವ ಹೀಗೆ ಇರಬೇಕು ಅಂಥ ಹೇಳಿದರೆ ನಾನು ಬಿಟ್ಟುಬಿಡುವೆನು. ಎಲ್ಲರ ಸಲಹೆ ಪಡೆಯುವೆನು. – (ಚಪ್ಪಾಳೆ). ಚಪ್ಪಾಳೆ ಬೇಡ, ಮಾತು ಕೇಳಿ. ಮಾತು ತಿಳಿದುಕೊಳ್ಳಿ, ಎಲ್ಲರ ಅಭಿಪ್ರಾಯ ಕೇಳುವೆ. ವಿದ್ಯಾರ್ಥಿಗಳ ಸಲಹೆ ಎಷ್ಟೇ ಇದ್ದರೂ, ನನ್ನ ಸಮಯ ಇರುವಷ್ಟು, ಅವರೊಂದಿಗೆ ಚರ್ಚಿಸುವೆ. ಅವರ ಮಾತನ್ನು ಅರ್ಥಮಾಡಿಕೊಳ್ಳುವೆ. ಅಧಿಕಾಧಿಕವಾಗಿ ಅವರ ಮಾತನ್ನು ಸ್ವೀಕರಿಸುವೆ. ಆದರೆ ತೀರ್ಮಾನ ನನ್ನದಾಗಿರುವುದು. ಆ ತೀರ್ಮಾನವನ್ನು ಅವರು ಒಪ್ಪಿಕೊಳ್ಳಬೇಕಾಗುವುದು. ನೀವು ಒಪ್ಪಿಕೊಳ್ಳಬೇಕು. ಆಗ ಮಾತ್ರ ಈ ನೇತೃತ್ವಕ್ಕೆ ಅರ್ಥಬರುವುದು. ಆಗ ಮಾತ್ರ ಈ ಕ್ರಾಂತಿ ಸಫಲವಾಗುವುದು. ಇಲ್ಲವಾದರೆ ಪರಸ್ಪರರ ಜಗಳದಲ್ಲಿ, ವಾದ ವಿವಾದದಲ್ಲಿ ನಾವೆಲ್ಲಿ ಚದುರಿ ಹೋಗುವೆವೊ ಮತ್ತು ಅದರ ಪರಿಣಾಮವೇನಾಗುವುದು ಗೊತ್ತಿಲ್ಲ.

ಮಿತ್ರರೆ, ಕೆಲವು ಮಾತುಗಳನ್ನು ಹೇಳುವೆ ಮತ್ತು ಕೆಲವು ಕಾರ್ಯಕ್ರಮಗಳನ್ನು ನಿಮ್ಮ ಮುಂದೆ ಇಡುವೆ. ಬಹಳ ದಿನಗಳಿಂದ ಸಾರ್ವಜನಿಕ ಜೀವನದಲ್ಲಿದ್ದೇನೆ. ೧೯೨೧ರಲ್ಲಿ ಜನವರಿ ತಿಂಗಳಲ್ಲಿ ಇದೇ ಪಟನಾ ಕಾಲೇಜಿನಲ್ಲಿ ಐ.ಎಸ್.ಸಿಯ ವಿದ್ಯಾರ್ಥಿ ಆಗಿದ್ದೆ. ನನ್ನೊಂದಿಗೆ ಸ್ಕಾಲರ್‌ಶಿಪ್ ಪಡೆದ ವಿದ್ಯಾರ್ಥಿಗಳು ಇದ್ದರು. ಎಲ್ಲರೂ ಶ್ರೇಷ್ಠ ದರ್ಜೆಯವರಾಗಿದ್ದರು. ಕ್ರೀಮ್ ಆಗಿದ್ದರು. ಆ ಸಮಯದಲ್ಲಿಯ

ವಿದ್ಯಾರ್ಥಿಗಳು ಮತ್ತು ನಾನು ಎಲ್ಲರೂ ಒಟ್ಟಿಗೆ ಗಾಂಧೀಜಿಯವರ ಆಹ್ವಾನದ ಮೇರೆಗೆ ಅಸಹಯೋಗ ಮಾಡಿದೆವು. ಅಸಹಯೋಗ ಮಾಡಿದ ನಂತರ ಸುಮಾರು ಎರಡೂವರೆ ವರ್ಷ ನನ್ನ ಜೀವನ ಸುಮ್ಮನೇ ಕಳೆಯಿತು. ಮದನ ಮೋಹನ ಮಾಲ್ವಿಯಜಿ ಅವರ ಬಗ್ಗೆ ನನಗೆ ಗೌರವ ಇದೆ. ಆದರೆ ಹಿಂದೂ ವಿಶ್ವವಿದ್ಯಾಲಯದಲ್ಲಿ ಸೇರಿಕೊಳ್ಳಲು ನಾನು ಸಿದ್ಧನಿರಲಿಲ್ಲ. ಯಾಕೆಂದರೆ ಸರಕಾರದ ಹಣ, ಧನ ಸಹಾಯ ವಿಶ್ವವಿದ್ಯಾನಿಲಯಕ್ಕೆ ಸಿಗುತ್ತಿತ್ತು. ಸ್ವತಂತ್ರವಾಗಿರಲಿಲ್ಲ. ಅದು ಪೂರ್ಣ ರೂಪದಲ್ಲಿ ರಾಷ್ಟ್ರೀಯ ವಿದ್ಯಾಲಯವಾಗಿರಲಿಲ್ಲ. ಆದ್ದರಿಂದ ನಾನು ಯಾವುದೇ ವಿದ್ಯಾಲಯಕ್ಕೆ ಹೋಗಲಿಲ್ಲ. ಬಿಹಾರ್ ವಿದ್ಯಾಪೀಠದ ಐ.ಎಸ್.ಸಿ ಪರೀಕ್ಷೆ ಬರೆದೆ, ಪರೀಕ್ಷೆ ಪಾಸಾದೆ. ಆನಂತರ ಹೈಸ್ಕೂಲಿನಲ್ಲಿದ್ದಾಗ ನಾನು ಸತ್ಯದೇವರ ಭಾಷಣ ಕೇಳಿದ್ದೆ. ಅಮೇರಿಕಾದ ಬಗ್ಗೆ ಅವರು ಭಾಷಣ ಮಾಡಿದ್ದರು. ನಾನು ಶ್ರೀಮಂತ ಮನೆತನದವನಲ್ಲ. ಸ್ವಲ್ಪ ವ್ಯವಸಾಯವಿತ್ತು. ತಂದೆ ನಹರ್ ವಿಭಾಗದಲ್ಲಿ ಜಿಲ್ಲಾಧಾರ್ ಆಗಿದ್ದರು. ನಂತರ ರೆವಿನ್ಯೂ ಅಸಿಸ್ಟೆಂಟರಾದರು, ನಾನ್ ಗೆಜ಼ೆಟೆಡ್ ಅಧಿಕಾರಿಯಾಗಿದ್ದರು. ನನ್ನನ್ನು ಇಂಗ್ಲೆಂಡ್ ಅಥವಾ ಅಮೇರಿಕಾಕ್ಕೆ ಕಳುಹಿಸುವಷ್ಟು ಸಾಮರ್ಥ್ಯ ಅವರಿಗಿರಲಿಲ್ಲ. ಅಮೇರಿಕೆಯಲ್ಲಿ ಕೂಲಿ ಕೆಲಸಮಾಡಿ ಹುಡುಗರು ಓದಬಹುದೆಂದು ಕೇಳಿದ್ದೆ. ನನ್ನ ಇಚ್ಛೆ ಇದೇ ಆಗಿತ್ತು. ಅಸಹಕಾರ ಆಂದೋಲನ ತೀವ್ರವಾಗಿರಲಿಲ್ಲ. ಇಳಿಮುಖವಾಗಿತ್ತು. ಈ ಮಧ್ಯೆ ಅಮೇರಿಕಾಕ್ಕೆ ಹೋಗಿ ಶಿಕ್ಷಣ ಪಡೆದು ಬರಬೇಕೆಂದು ಅನಿಸಿತ್ತು. ಆದ್ದರಿಂದ ಅಮೇರಿಕಾಕ್ಕೆ ಹೋದೆ. ಅನೇಕ ವರ್ಷಗಳಿಂದ ಕೆಲವು ಜನ ನನಗೆ ಬೈಯುತ್ತಲೇ ಇದ್ದಾರೆ. ೧೯೭೪ ಜೂನ್ ೩ನೆಯ ತಾರೀಖು ನನಗೆ ಎಷ್ಟೊಂದು ಬೈಗಳನ್ನು ಹೇಳಲಾಯಿತು. ಏಕೆಂದರೆ ಅಮೇರಿಕಾದಲ್ಲಿ ಓದಿದ್ದರಿಂದ ನಾನು ಅಮೇರಿಕೆಯ ದಲ್ಲಾಳಿಯಾಗಿದ್ದೇನೆ ! ನಿಕ್ಸನ್‌ಗೆ ತಾರು ಕೊಡಿ. ಜಯಪ್ರಕಾಶ್‌ಗೆ ಸೋಲಾಯಿತು. ಎಂಬ ಘೋಷಣೆ ಕೂಗಿದರು. ಆ ನಾಚಿಕೆಗೇಡಿನ ಜನ.

' ಮಿತ್ರರೆ ಅಮೇರಿಕೆಯಲ್ಲಿ ನಾನು ತೋಟಗಳಲ್ಲಿ ಕೆಲಸಮಾಡಿದೆ, ಕಾರ್ಖಾನೆಗಳಲ್ಲಿ ಕೆಲಸಮಾಡಿದೆ – ಕಬ್ಬಿಣದ ಕಾರ್ಖಾನೆಗಳಲ್ಲಿ, ಕಸಾಯಿಖಾನೆಗಳಲ್ಲಿ ಕೆಲಸಮಾಡಿದೆ. ಯೂನಿವರ್ಸಿಟಿಯಲ್ಲಿ ಓದುತ್ತಿರುವಾಗ, ರಜಾದಿನಗಳಲ್ಲಿ ಕೆಲಸಮಾಡಿ ಸಂಪಾದಿಸುತ್ತಿದ್ದೆ. ಮೂರು ನಾಲ್ಕು ವಿದ್ಯಾರ್ಥಿಗಳು ಸೇರಿ ಅಡಿಗೆ ಮಾಡಿಕೊಳ್ಳುತ್ತಿದ್ದೆವು. ಕಡಿಮೆ ದುಡ್ಡಿನಲ್ಲಿ ಅಡಿಗೆ ಮಾಡಿಕೊಳ್ಳುತ್ತಿದ್ದೆವು. ಒಂದು ಕೊಠಡಿಯಲ್ಲಿ ಅನೇಕ ಜನರು ಒಟ್ಟಿಗೆ ಇರುತ್ತಿದ್ದೆವು. ಹಣ ಮಿಕ್ಕರೆ ಬಟ್ಟೆ ಖರೀದಿಸಲು, ಫೀಜ್ ಕಟ್ಟಲು ಖರ್ಚುಮಾಡುತ್ತಿದ್ದೆವು. ಭಾನುವಾರವೂ ರಜೆ ಇಲ್ಲ. ಒಂದು ತಾಸು ರೆಸ್ಟೋರೆಂಟ್‌ಗಳಲ್ಲಿ, ಹೋಟೆಲ್ಲುಗಳಲ್ಲಿ, ಪಾತ್ರೆ ತೊಳೆಯುವ ಕೆಲಸ ಅಥವಾ ವೇಯ್ಟರ್ ಕೆಲಸಮಾಡಿದೆ. ಊಟವೇನೊ ದೊರೆಯಿತು, ಮನೆಯ ಬಾಡಿಗೆ? ಎಷ್ಟೋ ವರ್ಷಗಳವರೆಗೆ ಎರಡು ಮಂಚ ಇರಲಿಲ್ಲ. ಕೋಣೆಯಲ್ಲಿ ಒಂದು ಮಂಚ. ಅದರ ಮೇಲೆ ನಾನು ಮತ್ತು ನನ್ನೊಂದಿಗೆ

ಯಾರಾದರೂ ಅಮೇರಿಕಾದ ಹುಡುಗ ಮಲಗುತ್ತಿದ್ದರು. ಹೊದೆದುಕೊಳ್ಳಲು ಒಂದು ರಗ್ಗು ಇತ್ತು. ಇಂಥ ಬಡತನದಲ್ಲಿ ನಾನು ಓದಿದ್ದೇನೆ. ಭಾನುವಾರದಂದು ಹೋಟೆಲ್ ಕೆಲಸ ಬಿಟ್ಟು ಬೂಟುಗಳನ್ನು ಸ್ವಚ್ಛಮಾಡುವ ಕೆಲಸ ಷೂ ಶೈನ್ ಪಾರ್ಲರ್‌ನಲ್ಲಿ ಕೆಲಸ ಮಾಡಿ, ಕಮೋಡ್ ಸ್ವಚ್ಛಮಾಡುವ ಕೆಲಸಮಾಡಿ ಬಿ.ಎ.ಪಾಸುಮಾಡಿದೆ. ಸ್ಕಾಲರ್‌ಶಿಪ್ ದೊರೆಯಿತು. ಮೂರು ತಿಂಗಳು ನಂತರ ಡಿಪಾರ್ಟ್‌ಮೆಂಟಿನ ಅಸಿಸ್ಟೆಂಟ್ ಆದೆ; ಟ್ಯುಟೋರಿಯಲ್ ಕ್ಲಾಸ್ ಪ್ರಾರಂಭಿಸಿದೆ. ಆಗ ಸ್ವಲ್ಪ ನೆಮ್ಮದಿ ದೊರೆಯಿತು. ನನ್ನ ಇತಿಹಾಸ ಈ ಜನಕ್ಕೆ ಗೊತ್ತಿದೆ. ಆದರೂ ಕೂಡ ನನಗೆ ಬೈಯುತ್ತಾರೆ.

ಅಮೇರಿಕಾದಲ್ಲಿ ವಿಸಕ್ಸಿನ್ ಮತ್ತು ಮೈಡಿಸನ್‌ನಲ್ಲಿದ್ದಾಗ ನಾನು ಘೋರ ಕಮ್ಯೂನಿಷ್ಟನಾಗಿದ್ದೆ. ಘೋರ ಮಾರ್ಕ್ಸವಾದಿಯಾದೆ. ಸ್ಟ್ಯಾಲಿನ್‌ವಾದಿಯಾಗಲಿಲ್ಲ. ಏಕೆಂದರೆ ಆಗ ಲೆನಿನ್ನನ ಕಾಲವಿತ್ತು. ಅದು ಟ್ರಾಟಸ್ಕಿಯ ಕಾಲವಿತ್ತು. ೧೯೨೪ರಲ್ಲಿ ಲೆನಿನ್ ತೀರಿಕೊಂಡರು. ಅದೇ ವರ್ಷ ನಾನು ಮಾರ್ಕ್ಸಸಿಸ್ಟ್ ಆಗಿದ್ದೆ. ಆ ಕಾಲದಲ್ಲಿ ಮಾರ್ಕ್ಸವಾದದ ಬಗ್ಗೆ ಪ್ರಕಟವಾಗಿದ್ದ ಗ್ರಂಥಗಳನ್ನೆಲ್ಲ ಓದಿ ಮುಗಿಸಿದ್ದೆ ಎಂಬುದನ್ನು ನಾನು ಧೈರ್ಯವಾಗಿ ಹೇಳಬಲ್ಲೆ. ಅಮೇರಿಕಾದಿಂದ ಭಾರತಕ್ಕೆ ಹಿಂದಿರುಗಿದಾಗ ಘೋರ ಕಮ್ಯುನಿಷ್ಟನಾಗಿ ಹಿಂದಿರುಗಿದ್ದೆ. ಆದರೆ ನಾನು ಕಮ್ಯುನಿಷ್ಟ ಪಾರ್ಟಿಗೆ ಸೇರದೆ ಕಾಂಗ್ರೆಸ್ಸಿಗೆ ಸೇರಿದೆ. ಏಕೆಂದರೆ ಗುಲಾಮ ದೇಶದ ಜನರ ಸ್ವಾತಂತ್ರ್ಯ ಹೋರಾಟದೊಂದಿಗೆ, ಯಾವ ಕಾರಣದಿಂದಲೂ ಕಮ್ಯುನಿಷ್ಟರು ದೂರವಿರಬಾರ ದೆಂಬುದನ್ನು ನಾನು ಲೆನಿನ್ ಅವರಿಂದ ತಿಳಿದಿದ್ದೆ. ಆ ಸಮಯದಲ್ಲಿ 'ಮೆರಟ್ ಕಾನ್ಸ್‌ರೆನ್ಸಿ' ಕೇಸ್ ನಡೆಯುತ್ತಿತ್ತು. ದೊಡ್ಡ ಜನರು ಜೇಲಿನಲ್ಲಿದ್ದರು. ನಾನು ಅವರನ್ನು ಹುಡುಕುತ್ತಾ ಹೋದೆ. ಘೋಟೆಯವರನ್ನು ಹುಡುಕಿದೆ, ಮಿರಜ್‌ಕರ್‌ರವರನ್ನು ಹುಡುಕಿದೆ, ಪಿ.ಸಿ.ಜೋಶಿಯವರನ್ನು ಹುಡುಕಿದೆ. ಇವರೊಂದಿಗೆ ಚರ್ಚೆಮಾಡಿದೆ. ಲಂಡನ್‌ನಲ್ಲಿ ಕ್ಲೆಮೆಸ್ ದತ್ತ ಅವರೊಂದಿಗೆ ಭೇಟಿಯಾಯಿತು. ಲೇಬರ್ ಮಂಥಲಿಯ ಸಂಪಾದಕ ಮತ್ತು ಅಲ್ಲಿಯ ಕಮ್ಯುನಿಷ್ಟ ಪಾರ್ಟಿಯ ಚಿಂತಕ ಅವರೊಂದಿಗೆ ಎಷ್ಟೋ ಮಾತುಕತೆ ನಡೆಯಿತು.

ಮಿತ್ರರೆ ಇದೆಲ್ಲವನ್ನು ಹೇಳುವವನಿರಲಿಲ್ಲ. ಆ ಎಂಟು ಪಾಯಿಂಟ್‌ಗಳಲ್ಲಿ ಇರಲಿಲ್ಲ. ಆದರೆ ಹೇಳಿಬಿಟ್ಟೆ, ಏಕೆಂದರೆ ಮನಸ್ಸು ಭಾರವಾಗಿದೆ. ಇಷ್ಟೊಂದು ದುಃಖ ಭರಿತವಾಗಿದೆ ನನ್ನು ಹೃದಯ. ಬಂಡವಾಳಶಾಹಿಗಳ ದಲಾಲಿ ಜಯಪ್ರಕಾಶ್ ಎಂದು ಘೋಷಣೆ ಕೂಗುತ್ತಾರೆ. ಈ ಘೋಷಣೆ ಕೂಗುವವರು ಯಾವ ಜಗತ್ತಿನಲ್ಲಿದ್ದಾರೆ, ಗೊತ್ತಿಲ್ಲ.

(ಕ್ರಮಶಃ).

ಅಭಿವೃದ್ಧಿಯ ಹೆಸರಲ್ಲಿ ಹಸ್ತಕ್ಷೇಪ

– ಫಾರುಕ್ ರಿಯಾಜ್, ಅನಿತಾ ಸೂದ್,
ಸರೋಜ್ ಭಾಯನಾ ಮತ್ತು ಅಲ್ಪನಾ ಶರ್ಮ

(ಬರಡಾಗಿದ್ದ ಕಲ್ಪವಲ್ಲಿ ಪ್ರದೇಶವನ್ನು ಪುನರ್ನಿರ್ಮಾಣ ಮಾಡಿ, ಕಾಯಕಲ್ಪ ನೀಡಿದ್ದೇನೋ ಸರಿಯೇ. ಆದರೆ ಪರಿಸರ ಸ್ನೇಹಿ ಶಕ್ತಿಯ ನೆಪದಲ್ಲಿ ಕಲ್ಪವಲ್ಲಿ ಅರಣ್ಯ ಮತ್ತೆ ಶಿಥಿಲವಾಗಿದೆ. ಪವನ ವಿದ್ಯುತ್ ಯಂತ್ರಗಳಿಂದ ಸ್ವಚ್ಛ ಶಕ್ತಿ ಉತ್ಪಾದನೆಯಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅವುಗಳಿಗೆ ತೆರುತ್ತಿರುವ ಬೆಲೆಯಾದರೂ ಎಷ್ಟು ಗೊತ್ತಿದೆಯೆ? ಈ ಪ್ರದೇಶದಲ್ಲಿಯ ಪವನ ವಿದ್ಯುತ್ ಯಂತ್ರಗಳ ಸ್ಥಾಪನೆ ಬೇರೆಯದೇ ಕತೆಯನ್ನು ನಮ್ಮೆದುರು ಬಿಚ್ಚಿಡುತ್ತದೆ.)

೨೦೦೧ರಲ್ಲಿ ಪವನ ವಿದ್ಯುತ್ ಯಂತ್ರ ಸ್ಥಾಪನಾ ಯೋಜನೆಯು ಕಲ್ಪವಲ್ಲಿಯ ಪ್ರಶಾಂತ ಪರಿಸರದಲ್ಲಿ ಕೋಲಾಹಲವನ್ನೇ ಎಬ್ಬಿಸಿತು. ಎನೆರ್‌ಕಾನ್ ಎಂಬ ಹೆಸರಿನ ಪವನ ವಿದ್ಯುತ್ ಯಂತ್ರ ಕಂಪೆನಿಯು ಕಲ್ಪವಲ್ಲಿ ಕಾಡಿನ ಪ್ರದೇಶದಲ್ಲಿ ಪವನ ವಿದ್ಯುತ್ ಯಂತ್ರಗಳನ್ನು ಸ್ಥಾಪಿಸಿ ಹಸಿರು ಕಣಿವೆಯನ್ನು ಗಾಳಿ ಪ್ರದೇಶವನ್ನಾಗಿ ಪರಿವರ್ತಿಸಿತು. ಕಂಪೆನಿಯ ಹಿತಾಸಕ್ತಿಗಳು ಸಮುದಾಯ ಆಧಾರಿತ ವಿಧಾನವನ್ನು ಬದಿಗೆ ಸರಿಸಿದವು. ಇದರಿಂದ ಪ್ರದೇಶದ ಪಾರಿಸರಿಕ ಮತ್ತು ಸಮಾಜೋ – ಆರ್ಥಿಕ ಸಂರಚನೆಗಳು ಧಕ್ಕೆಗೆ ಒಳಗಾದವು.

ಸ್ಥಳೀಯ ಸಮುದಾಯದ ಭಾವನೆಗಳು ಮತ್ತು ಕಾಳಜಿಗಳನ್ನು ನಿರ್ಲಕ್ಷಿಸಿ ಬೃಹತ್ತಾದ ಪವನ ವಿದ್ಯುತ್ ಯಂತ್ರಗಳ ನಿರ್ಮಾಣಕ್ಕಾಗಿ ಬೆಟ್ಟದ ತುದಿಯನ್ನು ಸಮತಟ್ಟು ಮಾಡಲಾಯಿತು. ಅದಕ್ಕಾಗಿ ಯಥೇಚ್ಛವಾಗಿ ಜಲಸಂಪನ್ಮೂಲಗಳನ್ನು ಬಳಸಿಕೊಳ್ಳಲಾಯಿತು. ಪವನ ವಿದ್ಯುತ್ ಯಂತ್ರದ ಬಿಡಿಭಾಗಗಳ ಸಾಗಣಿಕೆಗಾಗಿ ಅಂಕುಡೊಂಕಿನ ಬೃಹತ್ ರಸ್ತೆಗಳನ್ನು ನಿರ್ಮಿಸಲಾಯ್ತು. ಈ ರಸ್ತೆಗಳನ್ನು ನಿರ್ಮಿಸಲು ಬೆಟ್ಟ, ಗುಡ್ಡಗಳನ್ನು ಕಡಿಯಲಾಯಿತು, ದೊಡ್ಡ ದೊಡ್ಡ ಮರಗಳನ್ನು ಕೆಳಗೆ ಉರುಳಿಸಲಾಯಿತು ಎಂದು ಸ್ಥಳೀಯ ಗ್ರಾಮಸ್ಥರು ದೂರುತ್ತಾರೆ.

ಬೆಟ್ಟದ ಮೇಲೆ ಉಂಟಾದ ವಾಹನ ಸಂಚಾರದ ಹೆಚ್ಚಳದಿಂದ ಗ್ರಾಮಸ್ಥರಿಗೆ ಸಾಕಷ್ಟು ತೊಂದರೆ ಉಂಟಾಯಿತು. ಬೆಟ್ಟ ಗುಡ್ಡಗಳ ಮೇಲ್ಪದಿಯಲ್ಲಿ ನಿರ್ಮಿಸಲಾದ ಅಂಕು, ಡೊಂಕಾದ ರಸ್ತೆಗಳಿಂದಾಗಿ ಬೆಟ್ಟದ ಇಳಿಜಾರು ಪ್ರದೇಶದಲ್ಲಿ ಅಸಮತೋಲನ ಉಂಟಾಯಿತು. ಅದರಿಂದಾಗಿ ಕುರಿ ಮತ್ತು ದನಗಳ ಮೇವಿಗೆ ತೊಂದರೆಯಾಯಿತು. ಅವು ಸಮತಟ್ಟಾದ ನೆಲವನ್ನೇ ಅರಸಿಕೊಂಡು ಹೋಗುವಂತಾಯಿತು. ರಸ್ತೆಯ ಎತ್ತರ ಸುಮಾರು ಏಳು ಮೀಟರ್‌ನಷ್ಟಿದ್ದು, ಕುರಿಗಳಿಗೆ ಅದನ್ನು ಹತ್ತುವುದೇ ಕಷ್ಟವಾಗುತ್ತಿತ್ತು. ಸಮೀಪದ ಗ್ರಾಮಗಳಿಂದ ಹುಲ್ಲು ಮೇಯಲು ಬರುತ್ತಿದ್ದ ಕುರಿಗಳು ಇದೀಗ ಹುಲ್ಲಿಗಾಗಿ, ಮೇವಿಗಾಗಿ ಮೈಲುಗಟ್ಟಲೆ ಸಾಗುವಂತಹ ಪರಿಸ್ಥಿತಿ ಬಂದೊದಗಿತು. ಬೆಟ್ಟದ ಮೇಲೆ ನಿರ್ಮಿಸಲಾದ ರಸ್ತೆಗಳಿಂದಾಗಿ ಕಲ್ಪವಲ್ಲಿ ಅರಣ್ಯದ ಹುಲ್ಲುಗಾವಲಿನ ಪ್ರದೇಶ ಹಾಳಾಯಿತು. ಇರುವ ಹುಲ್ಲು ಒಣಗಿ ಹೋಯಿತು. ಹುಲ್ಲುಗಾವಲಿನ ಪ್ರದೇಶದ ತುಂಬೆಲ್ಲಾ ಧೂಳು ಆವರಿಸಿಕೊಂಡಿತು. ದನ, ಕರುಗಳಿಗೆ, ಕುರಿ, ಮೇಕೆಗಳ ಆಹಾರಕ್ಕೆ ಕೊರತೆ ಉಂಟಾಯಿತು. ಧೂಳಿನಿಂದಾಗಿ ಕೃಷಿ ಭೂಮಿಯೂ ಹಾಳಾಯಿತು. ವಿಪರೀತವಾದ ಶಬ್ಧಮಾಲಿನ್ಯದಿಂದ ಸ್ಥಳೀಯ ಗ್ರಾಮಸ್ಥರಿಗೆ ಮತ್ತು ರೈತರಿಗೆ ಅನಾನುಕೂಲವಾಯಿತು.

ಗೋಪಾಲಸ್ವಾಮಿ ಗುಡಿ ಪ್ರದೇಶದಲ್ಲಿದ್ದ ಸಾಕಷ್ಟು ಜಾನುವಾರುಗಳು ಪ್ಲಾಸ್ಟಿಕ್ ಸೇವಿಸಿ ಸಾವಿಗೀಡಾದವು ಎನ್ನಲಾಗಿದೆ. ಈ ಪ್ಲಾಸ್ಟಿಕ್ ವಸ್ತುಗಳು ಪವನ ವಿದ್ಯುತ್

ಯಂತ್ರ ಸ್ಥಾಪನೆಯ ಸಮಯದಲ್ಲಿ ಕಾರ್ಮಿಕರು ತಮ್ಮೊಂದಿಗೆ ತಂದುದಾಗಿದ್ದವು. ಅಷ್ಟೇ ಅಲ್ಲ ವಾಹನಗಳು ಢಿಕ್ಕಿ ಹೊಡೆದ ಪರಿಣಾಮ ಅದೆಷ್ಟೋ ಜಾನುವಾರುಗಳು ದುರ್ಮರಣಕ್ಕೆ ಈಡಾಗಿವೆ. ಪೂಜನೀಯವಾದ ಜಾನುವಾರುಗಳ ಸಾವಿನಿಂದ ಸ್ಥಳೀಯ ಸಮುದಾಯದ ಭಾವನೆಗಳಿಗೂ ಧಕ್ಕೆಯಾಗಿದೆ. ದೇವಸ್ಥಾನದ ಸಮೀಪದಲ್ಲಿದ್ದ ಹಳ್ಳ, ಕೊಳ್ಳಗಳು ಒಣಗಿ ಹೋಗಿದ್ದು, ನೀರು ಕಲುಷಿತವಾಗಿದೆ. ಜಾನುವಾರುಗಳು ಕೂಡ ಕುಡಿಯಲು ಆಗದಷ್ಟು ದುರ್ನಾತ ಬೀರುತ್ತಿದೆ.

ಕಲ್ಪವಲ್ಲಿ ಅರಣ್ಯದಲ್ಲಿರುವ ಹಳ್ಳ, ಕೊಳ್ಳಗಳು, ಸಣ್ಣ ತೊರೆಗಳು ಪವನ ವಿದ್ಯುತ್ ಯಂತ್ರಗಳನ್ನು ಅಳವಡಿಸಿದ ನಂತರ ಒಣಗಲು ಆರಂಭಿಸಿದವು. ವಿದ್ಯುತ್ ಕಂಬಗಳ ನೆಡುವಿಕೆ ಮತ್ತು ಗ್ರೌಂಡಿಂಗ್ ಮಾಡುವುದರಿಂದ ಭೂಮಿಯೊಳಗಿನ ತಾಪಮಾನ ಹೆಚ್ಚಿ, ಅಂತರ್ಜಲ ಮೂಲಕ್ಕೆ ಧಕ್ಕೆಯುಂಟಾಗಿದೆ ಎಂದು ಸ್ಥಳೀಯರು ಅಳಲು ತೋಡಿಕೊಳ್ಳುತ್ತಾರೆ. ಅರಣ್ಯ ಪ್ರದೇಶದ ಕಣಿವೆಯಲ್ಲಿರುವ ಹಳ್ಳ, ಕೊಳ್ಳಗಳು ಭೂಕುಸಿತದ ಕಾರಣ ಮುಚ್ಚಿಹೋಗುತ್ತಿದೆ. ಅದರ ಪರಿಣಾಮ ತಾಳೆ ಮರಗಳ ಮೇಲಾಗಿ, ಅವು ಒಣಗಿ ಹೋಗುತ್ತಿವೆ. ಒಣಗಿದ ಮರಗಳಲ್ಲಿ ಹಣ್ಣು ಬಿಡುತ್ತಿಲ್ಲ. ಅದರ ನೇರ ಪರಿಣಾಮ ಹಳ್ಳಿಗರ ಆರ್ಥಿಕ ಸ್ಥಿತಿಯ ಮೇಲೆ ಉಂಟಾಗಿ, ಅವರ ಜೀವನಮಟ್ಟ ಇಳಿಕೆ ಕಂಡಿದೆ. ಇದೀಗ ಕಲ್ಪವಲ್ಲಿ ಅರಣ್ಯ ಪ್ರದೇಶದಲ್ಲಿರುವ ಬಹುತೇಕ ಹಳ್ಳಗಳು, ತೊರೆಗಳು ಬತ್ತಿಯೇಹೋಗಿವೆ. ಅದರಿಂದಾಗಿ ಕಾಡು ಕೂಡ ಅಳಿವಿನ ಅಂಚಿಗೆ ಸಾಗುತ್ತಿದೆ.

ಕಲ್ಪವಲ್ಲಿ ಅರಣ್ಯ ಪ್ರದೇಶದಲ್ಲಿ ಪವನ ವಿದ್ಯುತ್ ಯಂತ್ರಗಳ ಸ್ಥಾಪನೆ ಮತ್ತು ಪರಿಣಾಮಗಳು ಒಂದು ಎಚ್ಚರಿಕೆಯ ಗಂಟೆಯಾಗಿದೆ. ಇದರಿಂದಾಗಿ ಒಂದೆಡೆ ಪರಿಸರದಲ್ಲಿ ಅಸಮತೋಲನತೆ ಉಂಟಾಗಿದ್ದರೆ ಮತ್ತೊಂದು ಕಡೆ ಸ್ಥಳೀಯರ ಜೀವನಾಧಾರವಾಗಿದ್ದ ಪರಿಸರ ಸಂಪನ್ಮೂಲಕ್ಕೇ ತೊಂದರೆಯುಂಟಾಗಿದೆ. ಇದೀಗ ಗುಡ್ಡಗಳ ತುದಿಯಲ್ಲಿ ವಿದ್ಯುತ್ ಉತ್ಪಾದನೆಯ ದೃಷ್ಟಿಯಿಂದ ಪವನ ವಿದ್ಯುತ್ ಯಂತ್ರಗಳನ್ನು ನಿಲ್ಲಿಸಲಾಗಿದೆ. ಈ ಪವನ ವಿದ್ಯುತ್ ಯಂತ್ರಗಳು ಕಾಂಕ್ರೀಟ್ ಕಾಡಿನ ನಿರ್ಮಾಣಕ್ಕೆ ಕಾರಣವಾಗಿದೆ. ಈ ಯೋಜನೆಯಿಂದಾಗಿ ಟಿಂಬಕ್ಟು ಕಲೆಕ್ಟಿವ್ ಸಂಸ್ಥೆಯು ಎರಡು ದಶಕಗಳಿಂದ ನಡೆಸಿದ್ದ ಪರಿಸರ ಸ್ನೇಹಿ ಕಾರ್ಯಗಳು ನೆನಗುದಿಗೆ ಬೀಳುವಂತಾಗಿದೆ.

ಪವನ ವಿದ್ಯುತ್ ಯಂತ್ರಗಳ ಸ್ಥಾಪನೆಯಿಂದ ಕಾಡಿನ ಪರಿಸರ ಮತ್ತು ವಾತಾವರಣದಲ್ಲಿ ಸಾಕಷ್ಟು ಬದಲಾವಣೆ ಉಂಟಾಗಿದೆ. ಹಸಿರು ಕಣಿವೆಯು ವಿನಾಶದ ಭೀತಿಯನ್ನು ಎದುರಿಸುತ್ತಿದೆ. ಕಾಡಿನ ವ್ಯಾಪ್ತಿ ಕಡಿಮೆಯಾಗುತ್ತಿದೆ. ಹಳ್ಳಕೊಳ್ಳಗಳು, ತೊರೆಗಳು, ಹುಲ್ಲುಗಾವಲು, ಜೀವನಾಧಾರ ಸಂಪನ್ಮೂಲಗಳು ಮತ್ತು ಜಲಸಂಪನ್ಮೂಲ ವ್ಯವಸ್ಥೆಗಳು ಕಲುಷಿತಗೊಂಡಿವೆ. ಸಮೀಪದ ಗ್ರಾಮಸ್ಥರು ತೊಂದರೆಗೆ ಈಡಾಗಿದ್ದಾರೆ. ಸ್ಥಳೀಯ ಗ್ರಾಮಸ್ಥರ ಬದುಕಿನ ಮೇಲೆ ಅಡ್ಡ ಪರಿಣಾಮ ಉಂಟಾಗಿರುವುದರ ಜೊತೆಗೇ, ಈ ಪ್ರದೇಶಕ್ಕೆ ವಲಸೆ ಬರುತ್ತಿದ್ದ ಕುರಿಕಾಯುವವರಿಗೂ ತೊಂದರೆ ಉಂಟಾಗಿದೆ. ಇಷ್ಟು ದಿನಗಳ ಕಾಲ ಶಾಂತವಾಗಿದ್ದ ಕಣಿವೆ ಇದೀಗ ಗೊಂದಲಗಳ ಗೂಡಾಗಿದೆ.

ಪವನ ವಿದ್ಯುತ್ ಯಂತ್ರಗಳಿಗೆ ಅಳವಡಿಸಿರುವ ಬ್ಲೇಡ್‌ಗಳ ತಿರುಗುವಿಕೆಯಿಂದಾಗಿ ಈ ಮೌನ ಕಣಿವೆಯು ಒರಟೊರಟಾದ ಶಬ್ದಗಳಿಂದ ತುಂಬಿಹೋಗಿದೆ. ಪವನ ವಿದ್ಯುತ್ ಯಂತ್ರ ಚಾಲೂ ಆಗುವುದು ಮತ್ತು ನಿಂತುಹೋಗುವುದರ ಕಿರಿಕಿರಿ ಸದ್ದು ನಮಗೆ ಒಂದೇ ಸಂದೇಶ ಕೊಡುತ್ತಿದೆ: ನಮ್ಮ ಸುತ್ತಮುತ್ತಲೂ ನಾವು ನೋಡುವ ಸಮೃದ್ಧಿಯು ಅಲ್ಲೇ ಉತ್ಪಾದಿತವಾಗುವ ಮೆಗಾವಾಟ್ ವಿದ್ಯುತ್ತನ್ನು ಪಡೆಯಲಾಗದ ಸ್ಥಳೀಯ ಜನರ ರಕ್ತ ಮತ್ತು ಬೆವರಿನ ಮೇಲೆ ಕಾಲಿಟ್ಟ ಬೆಲೆ.

– ಸಾಭಾರ : ಲೀಸಾ ಇಂಡಿಯಾ

ನಾರಾಯಣ್ ದೇಸಾಯಿ :
ಅದ್ವಿತೀಯ ಸರ್ವೋದಯ ಕಾರ್ಯಕರ್ತ

ಸರ್ವೋದಯ ಆಂದೋಲನದಲ್ಲಿ ತೊಡಗಿರುವ ಕಾರ್ಯಕರ್ತರಿಗೆಲ್ಲ ಚಿರಪರಿಚಿತರಾಗಿದ್ದ ನಾರಾಯಣ್ ದೇಸಾಯಿ ಮಾರ್ಚ್ ೨೦೧೫ರಂದು ತಮ್ಮ ಪರಿಪಕ್ವ ಮತ್ತು ಕ್ರಿಯಾಶೀಲ ಜೀವನದ ೯೧ನೇ ವಯಸ್ಸಿನಲ್ಲಿ ತೀರಿಕೊಂಡರು. ಆದರೆ ಭಾರತ ಸರ್ವೋದಯ ಆಂದೋಲನ ಜಗತ್ತಿನಲ್ಲಿ ಅವರು ಅಜರಾಮರರಾಗಿಯೇ ಇರುತ್ತಾರೆ. ಅವರು ಕೈಗೊಂಡಿದ್ದ ರಚನಾತ್ಮಕ ಕಾರ್ಯಗಳು, ಅಹಿಂಸಾತ್ಮಕ ಹೋರಾಟಗಳು, ಶಿಕ್ಷಣ ಕ್ಷೇತ್ರದಲ್ಲಿಯ ಪ್ರಯೋಗಗಳು, ಯುವಕರೊಂದಿಗೆ ಇದ್ದ ಒಡನಾಟಗಳು, ದೇಶದ ಉದ್ದಗಲಕ್ಕೂ ನಡೆಸಿದ ಗಾಂಧಿ ಕಥಾ ಕಾರ್ಯಕ್ರಮಗಳು, ಶಾಂತಿ ಸೇನಾ ಚಟುವಟಿಕೆಗಳು ಇತ್ಯಾದಿ ನೂರಾರು ಬಗೆಯ ಚಟುವಟಿಕೆಗಳಲ್ಲಿ ತೊಡಗಿದ್ದ ನಾರಾಯಣ್ ದೇಸಾಯಿ ಇಂದಿನ ಸರ್ವೋದಯ ಆಂದೋಲನದ ಎಲ್ಲ ಕಾರ್ಯಕರ್ತರಿಗೆ ಮುಖ್ಯವಾಗಿ ಲೋಕಸೇವಕರಿಗೆ ಆದರ್ಶಮಯವಾದ ವ್ಯಕ್ತಿಯಾಗಿದ್ದರು. ಅವರಿಲ್ಲದ ಸರ್ವೋದಯ ಆಂದೋಲನ ತನ್ನ ತೇಜಸ್ಸನ್ನು ಮತ್ತು ಪ್ರಖರ ಚಿಂತಕನನ್ನು ಕಳೆದುಕೊಂಡಂತಾಗಿದೆ. ೧೯೨೪ರಲ್ಲಿ ಹುಟ್ಟಿದಂದಿನಿಂದ ಪ್ರೌಢಾವಸ್ಥೆಯವರೆಗು ಅವರು ಗಾಂಧೀಜಿಯವರ ನಿಕಟತೆಯಲ್ಲಿ ಮತ್ತು ಅವರ ನೆರಳಿನಲ್ಲಿ ಬೆಳೆದಂಥವರು. ನಾರಾಯಣ್ ದೇಸಾಯಿಯವರ ತಂದೆ ಮಹದೇವ್ ದೇಸಾಯಿ ಗಾಂಧೀಜಿಯವರ ಕಾರ್ಯದರ್ಶಿಯವಾಗಿ ೨೪ವರ್ಷಗಳಷ್ಟು ಕಾಲ ಕೆಲಸಮಾಡಿದಂಥವರು. ಅವರೊಂದಿಗೆ ಅವರ ಪತ್ನಿ ದುರ್ಗಬೆಹನ್ ಕೂಡ ಗಾಂಧೀಜಿ ಮತ್ತು ಕಸ್ತೂರಿ ಬಾ ರವರ ಸೇವೆಯಲ್ಲಿ ತೊಡಗಿಸಿಕೊಂಡಿದ್ದವರು. ಇಂಥ ದಂಪತಿಗಳ ಮಗನಾಗಿ ಜನ್ಮವೆತ್ತಿದ ನಾರಾಯಣ್ ಗಾಂಧೀಜಿಯವರ ತೊಡೆಯ ಮೇಲೆಯೇ ಆಡಿ ಬೆಳೆದಂಥ ಹುಡುಗ. ಇಂಥ ಭಾಗ್ಯ ದೊರೆಯುವುದು ತೀರ ತೀರ ಅಪರೂಪ. ನಾರಾಯಣ್ ದೇಸಾಯಿ ತಮ್ಮ ಇಳಿವಯಸ್ಸಿನಲ್ಲೂ ಕೂಡ ಪ್ರತಿ ದಿನ ಸಾಯಂಕಾಲ ಒಂದು ಗಂಟೆ ಕಾಲ ತನ್ಮಯತೆಯಿಂದ ಧ್ಯಾನಾಸಕ್ತರಾಗಿ ನೂಲುತ್ತಿದ್ದರು. ಆ ದೃಷ್ಯ ನೋಡುವುದೇ ವಿಶೇಷ. ಬಾಲ್ಯಾವಸ್ಥೆಯಲ್ಲಿ ಗಾಂಧೀಜಿಯಿಂದ ಪ್ರಭಾವಿತರಾಗಿದ್ದ ನಾರಾಯಣ್ ದೇಸಾಯಿ ಯೌವನದಲ್ಲಿ ಆಚಾರ್ಯ ವಿನೋಬಾ ಭಾವೆ ಮತ್ತು ಜಯಪ್ರಕಾಶ್ ನಾರಾಯಣ್ ಅಂಥವರಿಂದ ಪ್ರಭಾವಿತರಾದರು. ವಿನೋಬಾರ ಭೂದಾನ ಚಳುವಳಿಯಲ್ಲಿ ಬಹಳ ಕ್ರಿಯಾಶೀಲವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ದೇಶದ ಅನೇಕ ಪ್ರದೇಶಗಳಲ್ಲಿ ಪಾದಯಾತ್ರೆ ಮಾಡಿದ್ದರಲ್ಲದೆ ಸ್ವಂತ ರಾಜ್ಯವಾದ ಗುಜರಾತಿನಲ್ಲಿ

ನೂರಾರು ಎಕರೆ ಭೂಮಿಯನ್ನು ದಾನವಾಗಿ ಪಡೆದರು. ಗಾಂಧೀಜಿಯವರು ಹೇಳಿದ್ದ ಒಂದು ಮುಖ್ಯವಾದ ಕಾರ್ಯಕ್ರಮ ಅಹಿಂಸೆಯ ಪ್ರಯೋಗಾರ್ಥವಾಗಿ ಮಾಡಿದ್ದ ಆದರೆ ಮರೆತು ಹೋಗಿದ್ದ ಶಾಂತಿ ಸೇನೆಯ ವಿಚಾರವನ್ನು ವಿನೋಬಾ ಭಾವೆ ಪುನರ್ ಪ್ರಸ್ತಾಪಿಸಿದರು. ಆ ಶಾಂತಿ ಸೇನೆಗೆ ಜಯಪ್ರಕಾಶ್ ನಾರಾಯಣ್ ನಾಯಕರಾಗಿ ಕೆಲಸಮಾಡಿದ ನಂತರ ನಾರಾಯಣ್ ದೇಸಾಯಿ ಶಾಂತಿ ಸೇನೆಯ ರಾಷ್ಟ್ರೀಯ ಕಾರ್ಯದರ್ಶಿಯಾಗಿ ಮಹತ್ವದ ಪಾತ್ರವಹಿಸಿದರು. ಜಯಪ್ರಕಾಶ್ ನಾರಾಯಣರ ಜ್ಞಾಪಕಾರ್ಥವಾಗಿ ಗುಜರಾತ್ ರಾಜ್ಯದ ವೇಡಚಿ ಎಂಬಲ್ಲಿ ಸಂಪೂರ್ಣ ಕ್ರಾಂತಿ ವಿದ್ಯಾಲಯವನ್ನು ಸ್ಥಾಪಿಸಿದರು. ಆ ವಿದ್ಯಾಲಯದ ಮೂಲಕ ಯುವಕರು ಅಹಿಂಸಾತ್ಮಕ ಚಳುವಳಿಗಳಲ್ಲಿ ಮತ್ತು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಸಿದ್ಧಮಾಡುತ್ತಿದ್ದರು. ದೇಶದಾದ್ಯಂತ ಯುವಕರನ್ನು ಸಂಪೂರ್ಣಕ್ರಾಂತಿ ವಿದ್ಯಾಲಯ ಆಕರ್ಷಿಸಿತ್ತು. ನಾರಾಯಣ್ ದೇಸಾಯಿಯವರಿಗೆ ದೇಶದ ಅನೇಕ ಭಾಷೆಗಳು ಗೊತ್ತಿದ್ದವು. ಅಣು ವಿದ್ಯುತ್ ಸ್ಥಾವರಗಳನ್ನು ಅವರು ವಿರೋಧಿಸುತ್ತಿದ್ದರು. ಗುಜರಾತ್‌ನಲ್ಲಿ ಅಂಥ ಒಂದು ಸ್ಥಾವರವನ್ನು ಸ್ಥಾಪಿಸುವ ಯೋಜನೆ ಬಂದಾಗ ಅದನ್ನು ಅವರು ಬಲವಾಗಿ ವಿರೋಧಿಸಿದರು. ವಿದೇಶದಲ್ಲಿರುವ ವಿವಿಧ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಸಂಪೂರ್ಣಕ್ರಾಂತಿ ವಿದ್ಯಾಲಯಕ್ಕೆ ಬಂದು ವಿದ್ಯಾಲಯದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು ಮತ್ತು ಸರ್ವೋದಯದ ಆಂದೋಲನದ ಬಗ್ಗೆ ತಿಳಿದುಕೊಳ್ಳುತ್ತಿದ್ದರು. ಒಂದು ಸಲ ವಿದೇಶೀ ವಿದ್ಯಾರ್ಥಿಗಳು ತಮ್ಮ ಎರಡು ವಾರಗಳ ಅಧ್ಯಯನವನ್ನು ಮುಗಿಸಿ ನಾರಾಯಣ್ ದೇಸಾಯಿಯವರೊಂದಿಗೆ ಫೋಟೋ ತೆಗೆದುಕೊಳ್ಳಲು ಬಯಸಿದರು. ಇದುವರೆಗೆ ಬೇರೆ ಬೇರೆ ಸಂದರ್ಭಗಳಲ್ಲಿ ಫೋಟೋ ತೆಗೆದುಕೊಳ್ಳಲು ಒಪ್ಪಿದ್ದ ನಾರಾಯಣ್ ದೇಸಾಯಿ ಬೀಳ್ಕೊಡುಗೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳು ಫೋಟೋ ತೆಗೆದುಕೊಳ್ಳಬೇಕೆಂದಾಗ ಅದನ್ನು ಅವರು ವಿರೋಧಿಸಿದರು. ಆಗ ಏಕೆ ಹೀಗೆಂದು ಅವರನ್ನು ವಿಚಾರಿಸಿದಾಗ ನಾರಾಯಣ್ ದೇಸಾಯಿ ಹೇಳಿದ್ದೇನೆಂದರೆ ನಿಮ್ಮ ಎರಡು ವಾರಗಳ ವಾಸ್ತವ್ಯದಲ್ಲಿ ನೀವು ಎಂದೂ ಪ್ರಶ್ನೆಗಳನ್ನೇ ಕೇಳಲಿಲ್ಲ. ಈಗ ಸ್ಮರಣಾರ್ಥವಾಗಿ ಫೋಟೋ ಬಯಸುತ್ತಿದ್ದೀರಿ. ಅದರಿಂದೇನು ಪ್ರಯೋಜನ ಎಂದು ಉದ್ಗಾರ ತೆಗೆದರು.

ಸ್ವಚ್ಛತಾ ಅಭಿಯಾನ ಮತ್ತು ಗಾಂಧಿ

(ಕೇಂದ್ರ ಸರ್ಕಾರ 'ಸ್ವಚ್ಛ ಭಾರತ' ಅಭಿಯಾನ ಎಂಬ ಆಂದೋಲನವನ್ನು ಬಿರುಸಾಗಿ ಪ್ರಾರಂಭಿಸಿದೆ. ಪವಿತ್ರ ಯಾತ್ರಾ ಸ್ಥಳಗಳಲ್ಲಿ, ಪ್ರವಾಸಿ ಕೇಂದ್ರಗಳಲ್ಲಿ ಮತ್ತು ನಗರಗಳಲ್ಲಿ ಕಸದ ರಾಶಿಯೇ ಬಿದ್ದಿದೆ. ಹಳ್ಳಿಗಳಲ್ಲೂ ಕೂಡ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಚೀಲಗಳು ಹಾರಾಡುತ್ತಿವೆ. ೧೫೦ ವರ್ಷಗಳ ಹಿಂದೆಯೇ ಗಾಂಧೀಜಿ ಸ್ವಚ್ಛ ಭಾರತ ಅಭಿಯಾನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ವಿಷಯವನ್ನು ಇಲ್ಲಿ ಪ್ರಸ್ತುತಗೊಳಿಸಲಾಗಿದೆ – ಸಂ)

ಇದೇ ಸಮಯದಲ್ಲಿ ಬೊಂಬಾಯಿಯಲ್ಲಿ ಪ್ಲೇಗು ರೋಗ ತಲೆಹಾಕಿತು. ನಾಲ್ಕು ದಿಕ್ಕುಗಳಲ್ಲೂ ಗಾಬರಿಯಿದ್ದಿತು. ರಾಜಕೋಟೆಗೂ ಪ್ಲೇಗು ಹರಡಬಹುದೆಂಬ ಭಯವಿತ್ತು. ಆರೋಗ್ಯ ಮತ್ತು ನೈರ್ಮಲ್ಯದ ಇಲಾಖೆಯಲ್ಲಿ ನಾನೂ ಸ್ವಲ್ಪ ಸೇವೆ ಮಾಡಬಹುದೆಂದು ನನಗೆ ತೋರಿದುದರಿಂದ ನನ್ನ ಸೇವೆಯನ್ನು ಅಂಗೀಕರಿಸಬೇಕೆಂದು ಸಂಸ್ಥಾನದ ಸರಕಾರಕ್ಕೆ ಬರೆದೆ. ಸರಕಾರ ನನ್ನ ಸೇವೆಯನ್ನು ಅಂಗೀಕರಿಸಿ ಈ ವಿಷಯವನ್ನು ನೋಡಿಕೊಳ್ಳಲು ರಚಿಸಿದ್ದ ಸಮಿತಿಗೆ ನನ್ನನ್ನೂ ಸೇರಿಸಿತು. ನಾನು ಪಾಯಖಾನೆ ಗೃಹಗಳ ಸ್ವಚ್ಛತೆಗೆ ಹೆಚ್ಚು ಪ್ರಾಮುಖ್ಯವನ್ನು ಕೊಟ್ಟೆ. ಸಮಿತಿಯು ಪ್ರತಿ ಬೀದಿಯಲ್ಲಿಯೂ ಇರುವ ಪಾಯಖಾನೆ ಗೃಹಗಳನ್ನು ಪರೀಕ್ಷೆಮಾಡಬೇಕೆಂದು ನಿರ್ಣಯಿಸಿತು. ತಮ್ಮ ಮನೆಗಳ ಪಾಯಖಾನೆ ಗೃಹಗಳನ್ನು ಸಮಿತಿ ಪರೀಕ್ಷಿಸಲು, ಬಡವರಿಗೆ ಏನೂ ಆಕ್ಷೇಪಣೆ ಇರಲಿಲ್ಲ. ಅಷ್ಟೇ ಅಲ್ಲ. ಬದಲಾವಣೆಗಳನ್ನು ಸೂಚಿಸಿದರೆ, ಅವನ್ನೂ ಅವರು ಮಾಡುತ್ತಿದ್ದರು. ಆದರೆ ಮೇಲುದರ್ಜೆಯವರ ಮನೆಗಳನ್ನು ನಾವು ಪರೀಕ್ಷಿಸಲು ಹೋದಾಗ, ಅವರು ನಮ್ಮನ್ನು ಮನೆಯೊಳಕ್ಕೆ ಬಿಡಲಿಲ್ಲ. ಇನ್ನು ನಮ್ಮ ಸಲಹೆ ಕೇಳುವುದೆಲ್ಲಿ ಬಂತು? ಧನಿಕರ ಪಾಯಖಾನೆ ಗೃಹ, ಬಡವರದಕ್ಕಿಂತ ಹೆಚ್ಚು ಕೊಳಕಾಗಿದ್ದಿತೆಂಬುದು ನಮ್ಮ ಸಾಮಾನ್ಯ ಅನುಭವ. ಅವು ಕತ್ತಲು ಕವಿದು ಕೊಳಕು ಕ್ರಿಮಿಗಳಿಂದ ದುರ್ಗಂಧ ಪೂರಿತವಾಗಿದ್ದವು. ನಾವು ಸೂಚಿಸಿದ ಸುಧಾರಣೆಗಳು ಸುಲಭವಾಗಿದ್ದವು. ಮಲ, ನೆಲದ ಮೇಲೆ ಬೀಳದಂತೆ ಬಕೆಟ್‌ಗಳನ್ನು ಇಡುವುದು, ಮೂತ್ರ ನೆಲದ ಮೇಲೆ ಬಿದ್ದು ಹಿಂಗುವುದರ ಬದಲು, ಅದು ಬಕೆಟ್‌ನಲ್ಲಿಯೇ ಶೇಖರವಾಗುವಂತೆ ನೋಡುವುದು, ಪಾಯಖಾನೆ ಮನೆಗೂ ಹೊರಗಿನ ಗೋಡೆಗೂ ನಡುವೆ ಇದ್ದ ಭಾಗವನ್ನು ಒಡೆದು ಹಾಕಿ, ಪಾಯಖಾನೆ ಮನೆಗೆ ಹೆಚ್ಚು ಬೆಳಕು ಗಾಳಿ ಬರುವಂತೆಯೂ ಝಾಡಮಾಲಿ ಬಂದು ಚೆನ್ನಾಗಿ ಶುದ್ಧಿಮಾಡುವುದಕ್ಕೂ ಅವಕಾಶ ಮಾಡಿಕೊಡುವುದು. ಧನಿಕ ವರ್ಗ, ಈ ಕೊನೆಯ ಸುಧಾರಣೆಗೆ ಅನೇಕ ಅಡ್ಡಿಗಳನ್ನು ಒಡ್ಡಿದರು. ಅನೇಕರು ಅದನ್ನು ನಡೆಸಲೇ ಇಲ್ಲ.

ಸಮಿತಿ ಅಸ್ಪೃಶ್ಯರ ನಿವಾಸಗಳನ್ನೂ ಪರೀಕ್ಷೆ ಮಾಡಬೇಕಾಗಿತ್ತು. ಆ ನಿವಾಸಗಳಿಗೆ ನನ್ನೊಂದಿಗೆ ಬರಲು ಸಮಿತಿಯ ಒಬ್ಬ ಸದಸ್ಯರು ಮಾತ್ರ ಸಿದ್ಧರಾದರು. ಉಳಿದವರಿಂದ ಅಲ್ಲಿಗೆ ಹೋಗುವುದಾಗಲೀ ಅವರ ಪಾಯಖಾನೆ ಗೃಹಗಳನ್ನು ಪರೀಕ್ಷಿಸುವುದಾಗಲೀ ಸಾಧ್ಯವೇ ಇರಲಿಲ್ಲ. ಅಸ್ಪೃಶ್ಯರ ನಿವಾಸಕ್ಕೆ ನಾನು ಭೇಟಿಯನ್ನು ಕೊಟ್ಟುದು ನನ್ನ ಜೀವಮಾನದಲ್ಲಿ ಅದೇ ಮೊದಲನೆಯ ಬಾರಿಯಾಗಿದ್ದಿತು. ಅಲ್ಲಿಯ ಸ್ತ್ರೀ ಪುರುಷರಿಗೆ ನಮ್ಮನ್ನು ನೋಡಿ ಆಶ್ಚರ್ಯವಾಯಿತು. "ನಿಮ್ಮ ಪಾಯಖಾನೆ ಮನೆಗಳನ್ನು ನಾವು

ಪರೀಕ್ಷಿಸಬೇಕಾಗಿದೆ" ಎಂದು ನಾನು ಹೇಳಿದೆ.

ಅವರು ಆಶ್ಚರ್ಯದಿಂದ "ನಮ್ಮ ಪಾಯಖಾನೆ ಮನೆಗಳೇ!" ಎಂದರು. "ನಾವು ಹೊರಗೆ ಬಯಲಿನಲ್ಲಿ ಹೋಗಿ ನಮ್ಮ ಕಾರ್ಯ ತೀರಿಸಿ ಬರುತ್ತೇವೆ. ಪಾಯಖಾನೆ ಮನೆಗಳು ನಿಮ್ಮಂತಹ ದೊಡ್ಡವರಿಗೆ" ಎಂದರು.

"ಸರಿ. ಹಾಗಾದರೆ ನಿಮ್ಮ ಮನೆಗಳನ್ನು ನಾವು ಪರೀಕ್ಷಿಸಿದರೆ ನಿಮ್ಮ ಆಕ್ಷೇಪಣೆ ಇಲ್ಲವಲ್ಲ?" ಎಂದು ನಾನು ಕೇಳಿದೆ.

"ಧಾರಾಳವಾಗಿ ಬನ್ನಿ ಸ್ವಾಮಿ. ನಮ್ಮ ಮನೆಗಳ ಮೂಲೆಮೂಲೆಗಳನ್ನೂ ನೀವು ನೋಡಬಹುದು. ನಮ್ಮದು ಮನೆಗಳಲ್ಲ, ಬಿಲಗಳು."

ನಾನು ಒಳಗೆ ಹೋದೆ. ನೋಡಿ ಸಂತೋಷವಾಯಿತು. ಮನೆಯ ಒಳಗೆ, ಹೊರಗೆ ಇದ್ದಷ್ಟೇ ಶುದ್ಧವಾಗಿತ್ತು. ಬಾಗಿಲನ್ನು ಶುದ್ಧವಾಗಿ ಒರೆಸಿದ್ದರು. ನೆಲವನ್ನು ಸಗಣಿಯಿಂದ ಚೆನ್ನಾಗಿ ಸಾರಿಸಿದ್ದರು. ಇದ್ದ ಒಂದೆರಡು ಮಡಕೆಗಳೂ ತಟ್ಟೆಗಳೂ ಶುದ್ಧವಾಗಿ ಹೊಳೆಯುತ್ತಿದ್ದವು. ಪ್ಲೇಗ್ ಅಲ್ಲಿಗೆ ಪ್ರವೇಶಿಸುವ ಭಯವಿರಲಿಲ್ಲ.

ಶ್ರೀಮಂತರ ಮನೆಯೊಂದರೊಳಗೆ ನಾವು ಒಂದು ಪಾಯಖಾನೆ ಮನೆಯನ್ನು ನೋಡಿದೆವು. ಅದನ್ನು ಸ್ವಲ್ಪ ವಿಶದವಾಗಿ ವಿವರಿಸಬೇಕು. ಪ್ರತಿಯೊಂದು ಕೊಠಡಿಯಲ್ಲಿಯೂ ಒಂದು ಮೋರಿಯಿದ್ದಿತು. ಇದನ್ನೂ ಮೂತ್ರವಿಸರ್ಜನೆಗೂ ನೀರನ್ನು ಚೆಲ್ಲುವುದಕ್ಕೂ ಉಪಯೋಗಿಸುತ್ತಿದ್ದರು. ಇದರಿಂದ ಮನೆಯೆಲ್ಲ ದುರ್ಗಂಧದಿಂದ ತುಂಬಿತ್ತು. ಆದರೆ ಒಂದು ಮನೆಯ ಮಹಡಿಯಲ್ಲಿ ಒಂದು ಮಲಗುವ ಕೋಣೆಯಿತ್ತು. ಅದರಲ್ಲಿಯೂ ಒಂದು ಮೋರಿಯಿತ್ತು. ಅದನ್ನು ಮೂತ್ರಕ್ಕಾಗಿಯೂ, ಪಾಯಖಾನೆಗಾಗಿಯೂ ಉಪಯೋಗಿಸುತ್ತಿದ್ದರು. ಮೋರಿಗೆ ಸೇರಿದ ಒಂದು ಕೊಳವೆಯಲ್ಲಿ ಮಲಮೂತ್ರವೆಲ್ಲ ಮಹಡಿಯಿಂದ ಕೆಳಕ್ಕೆ ಇಳಿಯುತ್ತಿತ್ತು. ಆ ಕೊಠಡಿಯ ದುರ್ನಾತ ಸಹಿಸಲು ಅಸಾಧ್ಯವಾಗಿತ್ತು. ಮನೆಯವರು ಹೇಗೆ ಅಲ್ಲಿ ಮಲಗುತ್ತಿದ್ದರೋ ವಾಚಕರೇ ಊಹಿಸಲಿ.!

ಸಮಿತಿಯವರು, ವೈಷ್ಣವ ಹವೇಲಿ(ದೇವಾಲಯ) ವನ್ನೂ ಹೋಗಿ ನೋಡಿದರು. ಹವೇಲಿಯ ಮೇಲ್ವಿಚಾರಕನಾಗಿದ್ದ ಪೂಜಾರಿಗೂ ನಮ್ಮ ಮನೆಯವರಿಗೂ ತುಂಬಾ ಸ್ನೇಹವಿತ್ತು. ಆದುದರಿಂದ ನಾವು ಹವೇಲಿಯನ್ನು ಪರೀಕ್ಷಿಸಲು ಮತ್ತು ನಮಗೆ ಅವಶ್ಯಕವೆಂದು ತೋರಿದ ಸುಧಾರಣೆಗಳನ್ನು ಸೂಚಿಲು ಒಪ್ಪಿದೆವು. ಆತನೇ ಎಂದಿಗೂ ನೋಡಿಲ್ಲದ ಹವೇಲಿಯ ಆವರಣದ ಒಂದು ಭಾಗವಿತ್ತು. ಅದು ಊಟದ ಎಲೆಗಳನ್ನೂ ಇತರ ಕಸವನ್ನೂ ಗೋಡೆಯಿಂದ ಆಚೆಗೆ ಎಸೆಯುತ್ತಿದ್ದ ಜಾಗ. ಅದು ಕಾಗೆ, ಹದ್ದುಗಳು ಯಾವಾಗಲೂ ಬಂದು ಹೋಗುವ ಸ್ಥಳವಾಗಿತ್ತು. ಪಾಯಖಾನೆ ಗೃಹಗಳಂತೂ ಅಶುದ್ಧವಾಗಿದ್ದವು. ನಾವು ಕೊಟ್ಟ ಸಲಹೆಗಳ ಪೈಕಿ, ಪೂಜಾರಿ ಯಾವಯಾವುದನ್ನು ನಡೆಸಿದ ಎಂಬುದನ್ನು ಅರಿಯಲು ನಾನು ಹೆಚ್ಚು ಕಾಲ ರಾಜಕೋಟೆಯಲ್ಲಿ ನಿಲ್ಲಲಿಲ್ಲ.

ಪೂಜಾಸ್ಥಾನದಲ್ಲಿ ಅಷ್ಟೊಂದು ಕೊಳಕನ್ನು ನೋಡಿ ನಾನು ದುಃಖಿತನಾದೆ. ಪವಿತ್ರವಾದ ಸ್ಥಳದಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ನಿಯಮಗಳನ್ನು ಎಚ್ಚರಿಕೆಯಿಂದ ಅನುಸರಿಸುತ್ತಾರೆಂದು ನಿರೀಕ್ಷಿಸುವುದು ಸಹಜವಾಗಿದೆ. ಆಗಲೇ ನನಗೆ ತಿಳಿದಿದ್ದಂತೆ, ಸ್ಮೃತಿಗಳ ಲೇಖಕರು ಅಂತರಂಗ ಬಹಿರಂಗ ಪರಿಶುದ್ಧತೆಗೆ ಅತ್ಯಂತ ಪ್ರಾಮುಖ್ಯವನ್ನು ಕೊಡಬೇಕೆಂದು ಹೇಳಿದ್ದಾರೆ.

ಆತ್ಮಚರಿತ್ರೆಯಿಂದ

ಸರ್ವೋದಯ ಆಂದೋಲನದ ಮುನ್ನಡೆ

ಅಖಿಲ ಭಾರತ ಸರ್ವೋದಯ ಸಮ್ಮೇಳನ ಪ್ರತಿವರ್ಷದಂತೆ ೨೦೧೫ನೇ ಸಾಲಿನ ಅಖಿಲಭಾರತ ಸರ್ವೋದಯ ಸಮಾಜ ಸಮ್ಮೇಳನ ಈ ಬಾರಿ ದೇಶದ ರಾಜಧಾನಿ ದಿಲ್ಲಿಯಲ್ಲಿ ನಡೆಯಲಿದೆ. ಸಮ್ಮೇಳನ ನಡೆಯುವ ದಿನಾಂಕ ೨೦೧೫ನವೆಂಬರ್ ೧ರಿಂದ ೩. ಸಮ್ಮೇಳನ ನಡೆಯುವ ಸ್ಥಳ ಹರಿಜನ ಸೇವಕ ಸಂಘ ಕಿಂಗ್ಸ್ ವೇ ಕ್ಯಾಂಪ್ ದಿಲ್ಲಿ – ೦೯. ಈ ಸಮ್ಮೇಳನಕ್ಕೆ ಬರುವವರಿಗೆ ರೈಲ್ವೆ ಪ್ರಯಾಣಕ್ಕೆ ಶೇ೫೦ರಷ್ಟು ರಿಯಾಯ್ತಿ ದೊರೆಯುತ್ತದೆ. ರಿಯಾಯ್ತಿ ಪಡೆಯುವುದಕ್ಕಾಗಿ ಅಧಿಕೃತ ನಮೂನೆಯು ಸೇವಾ ಗ್ರಾಮದಲ್ಲಿರುವ ಅಖಿಲ ಭಾರತ ಸರ್ವೋದಯ ಮಂಡಲಿಯಲ್ಲಿ ದೊರೆಯುತ್ತದೆ. ಪ್ರತಿಯೊಂದು ನಮೂನೆಗೂ ಹತ್ತು ರೂಪಾಯಿ ಶುಲ್ಕ ಕೊಡಬೇಕಾಗುವುದು. ನವೆಂಬರ್ ಮಾಹೆ ಹಬ್ಬದ ದಿನಗಳ ತಿಂಗಳಾಗಿರುವುದರಿಂದ ಕೂಡಲೇ ರೈಲ್ವೆಯಲ್ಲಿ ಸ್ಥಾನವನ್ನು ಕಾಯ್ದಿರಿಸಿಕೊಳ್ಳಬೇಕಾಗಿ ವಿನಂತಿ. ದಯಮಾಡಿ ಬೆಚ್ಚಗಿನ ಬಟ್ಟೆಯನ್ನು ತರಬೇಕಾಗಿ ವಿನಂತಿ.

***

ಸರ್ವಸೇವಾ ಸಂಘದ ೮೪ನೇ ಅಧಿವೇಶನ ೨೦೧೫ ಅಕ್ಟೋಬರ್ ೩೦, ೩೧ರಲ್ಲಿ ದಿಲ್ಲಿಯಲ್ಲಿ ಹರಿಜನ ಸೇವಕ ಸಂಘದ ಆವರಣದಲ್ಲಿ ನಡೆಯುವುದು. ಈ ಅಧಿವೇಶನಕ್ಕೆ ಎಲ್ಲ ಲೋಕ ಸೇವಕರಿಗೂ, ಸರ್ವೋದಯ ಮಿತ್ರರಿಗೂ ಹಾರ್ದಿಕವಾದ ಆಹ್ವಾನವುಂಟು. ಹೆಚ್ಚಿನ ವಿವರಗಳಿಗಾಗಿ

ಶ್ರೀ.ಲಕ್ಷ್ಮೀದಾಸ್ :- ೯೯೬೮೨೭೯೨೫೦

ಶ್ರೀ.ಅಶೋಕ್‌ಶರಣ್ :- ೯೮೧೦೯೪೮೮೭೦ ಇವರನ್ನು ಸಂಪರ್ಕಿಸಬಹುದು.

***

ಅಖಿಲ ಭಾರತ ಸರ್ವೋದಯ ಮಂಡಲ ಖಾದಿ ಸಮಿತಿ ಮತ್ತು ಖಾದಿ ಗ್ರಾಮೋದ್ಯೋಗ ಆಂದೋಲನ ಇವರ ಸಂಯುಕ್ತ ಆಶ್ರಯದಲ್ಲಿ ಸೆಪ್ಟೆಂಬರ್ ೧೧–೧೨ರಂದು ಖಾದಿ–ಗ್ರಾಮೋದ್ಯೋಗ ಸಮ್ಮೇಳನ, ಜಳಗಾವ್, ಮಹಾರಾಷ್ಟ್ರ.

ಇಂದಿನ ಸರ್ಕಾರದ ನೀತಿಗಳಲ್ಲಿ ಮತ್ತು ನಮ್ಮಲ್ಲಿರುವ ನ್ಯೂನ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಖಾದಿ ಗ್ರಾಮೋದ್ಯೋಗವನ್ನು ಆಂದೋಲನದ ರೂಪದಲ್ಲಿ ಮುಂದುವರೆಸಲು ಇರುವ ಮಾರ್ಗಗಳು ಯಾವುವು ಎಂಬ ಬಗ್ಗೆ ಸಾಮೂಹಿಕ ಚಿಂತನೆ ನಡೆಸಲು ಮತ್ತು ಕ್ರಿಯಾಶೀಲರಾಗುವ ಉದ್ದೇಶದಿಂದ ಒಂದು ರಾಷ್ಟ್ರೀಯ ಸಮ್ಮೇಳನವನ್ನು ಆಚಾರ್ಯ ವಿನೋಬಾ ಭಾವೆಯವರ ಜನ್ಮ ದಿನಾಂಕ ಸೆಪ್ಟೆಂಬರ್ ೧೧ ಮತ್ತು ೧೨ ೨೦೧೫ರಂದು ಮಹಾರಾಷ್ಟ್ರ ರಾಜ್ಯದ ಜಳಗಾವ್‌ನಲ್ಲಿ ಏರ್ಪಡಿಸಲಾಗಿದೆ.

ಖಾದಿ ಗ್ರಾಮೋದ್ಯೋಗದ ಉತ್ಪಾದನೆ ಮತ್ತು ಮಾರಾಟದಲ್ಲಿ ತೊಡಗಿದಂಥವರನ್ನು

ಖಾದಿ ಗ್ರಾಮೋದ್ಯೋಗ ಕ್ಷೇತ್ರದ ಜನರೆಂದು ಭಾವಿಸಲಾಗುತ್ತಿದೆ. ಇವರಲ್ಲದೆ, ಯಾರು ಅಭ್ಯಾಸಬಲದಿಂದ ಖಾದಿ ತೊಡುತ್ತಾರೊ ಮತ್ತು ಅದರ ಸಿದ್ಧಾಂತಗಳನ್ನು ಪ್ರಚಾರ ಮಾಡುತ್ತಾರೊ ಮತ್ತು ಯಾರು ತಮ್ಮ ಆರೋಗ್ಯದ ದೃಷ್ಟಿಯಿಂದ ಮತ್ತು ಸೌಕರ್ಯದ ದೃಷ್ಟಿಯಿಂದ ಖಾದಿ ಧರಿಸುತ್ತಾರೊ ಅಂಥವರೂ ಕೂಡ ಖಾದಿ ಕ್ಷೇತ್ರದ ಜನರೆಂದು ಗುರುತಿಸಲ್ಪಡುತ್ತಾರೆ. ಈಗ ಇವರೆಲ್ಲರೂ ಒಟ್ಟಿಗೆ ಸೇರಬೇಕಾಗಿದೆ. ಯಾರು ಖಾದಿಗ್ರಾಮೋದ್ಯೋಗ ಕ್ಷೇತ್ರದಲ್ಲಿ ಇದ್ದುಕೊಂಡು ತೊಂದರೆಗಳನ್ನು ಅನುಭವಿಸುತ್ತಿದ್ದಾರೊ ಅವರು ಮೊದಲು ಒಂದಾಗಬೇಕಾಗಿದೆ. ಎರಡನೆಯದಾಗಿ, ಮನುಕುಲವನ್ನು ಹಿಂಸೆಯಿಂದ ರಕ್ಷಿಸುವುದಕ್ಕಾಗಿಯೂ ಒಟ್ಟಿಗೆ ಸೇರಬೇಕಿದೆ.

ಮಾನವ ಸಮಾಜ ಸ್ವಲ್ಪ ಸಮಯದಲ್ಲಿಯೇ ಹಿಂಸೆಯಿಂದ ಮುಕ್ತವಾಗಲಾರದು. ಈ ಕೆಲಸ ದೀರ್ಘ ಕಾಲದ್ದಾಗಿದೆ. ಮಹಾತ್ಮಾ ಗಾಂಧಿ ಅದನ್ನು ಪ್ರಾರಂಭಿಸಿದ್ದಾರೆ. ಅಹಿಂಸೆಯ ಮಾತು ಹೊಸದೇನಲ್ಲ. ಗಾಂಧೀಜಿಗಿಂತಲೂ ಮೊದಲು ಜಗತ್ತಿನ ಎಲ್ಲ ಧರ್ಮಗಳಲ್ಲಿ ಈ ಮಾತನ್ನು ಹೇಳಲಾಗಿದೆ. ಆಧುನಿಕ ಅರ್ಥಶಾಸ್ತ್ರದೊಂದಿಗೆ ಉಂಟಾಗಿರುವ ಔದ್ಯೋಗಿಕ ಕ್ರಾಂತಿಯ ತರುವಾಯವೂ ಅಹಿಂಸೆಯನ್ನು ವ್ಯಕ್ತಿಗತವಾಗಿ ಮತ್ತು ಸಾಮೂಹಿಕ ಕ್ಷೇತ್ರದಲ್ಲಿ ಹೇಗೆ ಅಹಿಂಸೆಯನ್ನು ಅಳವಡಿಸಿಕೊಳ್ಳಬೇಕೆಂಬುದನ್ನು ಹೇಳಿದುದೆ ಗಾಂಧೀಜಿಯವರ ವಿಶೇಷತೆ ಆಗಿದೆ.

ಇಂದು ಎಲ್ಲ ಬಗೆಯ ರಿಯಾಯಿತಿಗಳು, ಅನುಕೂಲತೆಗಳು, ನೀತಿಗಳು ದೊಡ್ಡ ಉದ್ಯೋಗಗಳ ಪರವಾಗಿಯೇ ರೂಪಿತವಾಗುತ್ತಿವೆ. ಖಾದಿ ಗ್ರಾಮೋದ್ಯೋಗಗಳ ಉಸಿರುಕಟ್ಟುತ್ತಿದೆ. ಹಾಗಾದರೆ ಅಹಿಂಸಕ ಸಮಾಜ ರಚನೆಯ ಕೆಲಸದಲ್ಲಿ ತೊಡಗಿರುವ ನಾವೇನು ಮಾಡಬೇಕು?

ನಾವು ಖಾದಿ ಉತ್ಪಾದಕ ಅಥವಾ ಮಾರಾಟಗಾರರು ಮಾತ್ರ ಆಗಿದ್ದೇವೆಯೇ? ಕೇವಲ ಉದ್ಯೋಗ ಸೃಷ್ಟಿಸುವ ವ್ಯವಹಾರದ ಸಂಚಾಲಕರಾಗಿದ್ದೇವೆಯೇ? ಕೇವಲ ಆಸ್ತಿ ಪಾಸ್ತಿಯ ಸಂರಕ್ಷರಾಗಿದ್ದೇವೆಯೇ? ಗಾಂಧೀಜಿಯವರ ಒಂದು ಪರಂಪರೆಯನ್ನು ಮಾತ್ರ ಪಾಲಿಸುವಂಥವರಾಗಿದ್ದೇವೆಯೇ? ಖಾದಿಯೊಂದಿಗೆ ನಾವು ಗುರುತಿಸಿಕೊಂಡಿರುವುದಕ್ಕಾಗಿ ಅದನ್ನು ಉಳಿಸಿಕೊಳ್ಳಬಯಸುತ್ತೇವೆಯೇ? ಒಟ್ಟಿನಲ್ಲಿ ನಾವು ಯಾರು? ಈ ಎಲ್ಲ ವಿಷಯಗಳೊಂದಿಗೆ ಮಾನವ ಕುಲ ವಿಶೇಷ ಅಹಿಂಸಕ ಸಮಾಜದ ಕಡೆಗೆ ಕರೆದೊಯ್ಯುವ ಕೆಲಸ ಕೈಗೊಂಡಿರುವ ಸೈನಿಕರು ನಾವು. ಖಾದಿ ಗ್ರಾಮೋದ್ಯೋಗ ಅಂಥ ಸಮಾಜದ ಪ್ರತೀಕವಾಗಿದೆ. ಅದನ್ನು ಎಲ್ಲರಿಗೂ ಮತ್ತು ಸರ್ಕಾರಗಳಿಗೂ ತಿಳಿಸಬೇಕಾಗಿದೆ. ಈ ಕೆಲಸವನ್ನು ಒಂದು ಆಂದೋಲನ ಚಳುವಳಿಯ ರೂಪದಲ್ಲಿ ನಡೆಸಬೇಕಾಗಿದೆ. ಇದಕ್ಕಾಗಿ ಮೊಟ್ಟಮೊದಲು ನಾವೆಲ್ಲರೂ ಒಟ್ಟಿಗೆ ಸೇರಬೇಕು. ನಂತರ, ನಮ್ಮ ಮುಂದೆ ಯಾವ ಯಾವ ಆಹ್ವಾನಗಳಿವೆ ಅಥವಾ ಕಷ್ಟಗಳಿವೆ ಎಂಬುದನ್ನು ಖಚಿತಮಾಡಿಕೊಳ್ಳಬೇಕು. ನಂತರ ಆ ಬಗ್ಗೆ ಸಾಮೂಹಿಕ ಕಾರ್ಯಾಚರಣೆ ಏನು ಎಂಬುದನ್ನು ನಿಶ್ಚಯಿಸಿ ಅದನ್ನು ಜಾರಿಗೆ ತರಬೇಕಾಗಿದೆ.

ಜಾಗತೀಕರಣದ ನಂತರ ಬಹು ತೀವ್ರಗತಿಯಿಂದ ಖಾದಿಯನ್ನು ಕೇವಲ ಒಂದು ಉತ್ಪಾದನೆ ಹಾಗೂ ಮಾರಾಟದ ವಸ್ತುವನ್ನಾಗಿ ಮಾಡಲು ಸರಕಾರ ನಿಶ್ಚಯಿಸಿ

ಅದರಂತೆ ಮಾಡಲಾಗುತ್ತಿದೆ. ನಾವು ಅವ್ಯಾಹತವಾಗಿ ಅನ್ಯಾಯಕ್ಕೆ ಬಲಿಯಾಗುತ್ತಿದ್ದೇವೆ. ಈ ಅನ್ಯಾಯವನ್ನು ಇದೇ ರೀತಿ ಸಹಿಸಿಕೊಳ್ಳೋಣವೆ? ಇದರ ವಿರುದ್ಧ ಪ್ರತೀಕಾರವನ್ನು ಅಹಿಂಸಕ ಪದ್ಧತಿಯಿಂದ ಹೇಗೆ ಮಾಡುವೆವು? ಇದಕ್ಕೆ ಪರ್ಯಾಯ ಹೇಗೆ ಕಂಡುಹಿಡಿಯುವೆವು? ಮನುಷ್ಯರ ಮತ್ತು ಪ್ರಕೃತಿಯ ಶೋಷಣೆಯ ವಿರುದ್ಧ ಕ್ರಾಂತಿಯ ಬಾವುಟ ಖಾದಿ ಆಗಿದ್ದರೆ ನಾವೆಲ್ಲರೂ ಒಂದುಗೂಡಲೇಬೇಕು. ಅದು ಇಂದು ಆಗದಿದ್ದರೆ ಎಂದೂ ಆಗವುದಿಲ್ಲ. ನಾವು ಒಬ್ಬೊಬ್ಬರಾಗಿ ಸಮಾಪ್ತರಾಗೋಣವೇ ಅಥವಾ ಸಾಮೂಹಿಕವಾಗಿ ಕ್ರಿಯಾಶೀಲರಾಗಿ ಅಹಿಂಸೆಯ ಜ್ಯೋತಿಯನ್ನು ಪ್ರಖರಗೊಳಿಸೋಣವೆ?

ಈ ಸಾಮೂಹಿಕ ಚಿಂತನೆಗಾಗಿ ಮತ್ತು ಕೃತಿಗಾಗಿ ನಾವು ನಿಮ್ಮನ್ನು ಆಮಂತ್ರಿಸುತ್ತಿದ್ದೇವೆ. ಇದಕ್ಕೆ ಸಂಬಂಧಿತ ವಿಷಯಗಳ ಬಗ್ಗೆ ನಿಮ್ಮ ನಿಮ್ಮ ವಿಚಾರವನ್ನು ಇಮೇಲ್ ಮೂಲಕವಾಗಲಿ ಅಂಚೆ ಮೂಲಕವಾಗಲಿ ಕಳುಹಿಸಬೇಕೆಂದು ವಿನಂತಿ. ಎಲ್ಲ ವಿಚಾರಗಳನ್ನೂ ನಿಮ್ಮೆಲ್ಲರೊಂದಿಗೆ ಚರ್ಚಿಸಲಾಗುವುದು. ಚರ್ಚೆಯ ಮೂಸೆಯಿಂದ ಹೊರಬರುವ ವಿಷಯಗಳ ಬಗ್ಗೆಯೂ ಚರ್ಚೆಮಾಡೋಣ. ಎರಡು ದಿವಸ ಪೂರ್ತ ಕೇವಲ ಭಾಷಣಗಳಿಗೆ ಸೀಮಿತಗೊಳಿಸದೆ ಸಹ ಭಾಗಿತ್ವದ ಪದ್ಧತಿಯಂತೆ ಗೋಷ್ಠಿನಡೆಸಲಾಗುವುದು. ನೀವು ಕಂಪ್ಯೂಟರ್ ಮೂಲಕ ವಿಷಯ ಮಂಡಿಸುವುದಾದರೆ ಅದರ ವ್ಯವಸ್ಥೆಯನ್ನೂ ಮಾಡಲಾಗುವುದು. ಸಮ್ಮೇಳನವು ಸೆಪ್ಟೆಂಬರ್ ೧೧ರಿಂದ ಬೆಳಿಗ್ಗೆ ೧೦.೦೦ಗಂಟೆಯಿಂದ ಸೆಪ್ಟೆಂಬರ್ ೧೨ ಸಂಜೆ ೫.೦೦ಗಂಟೆಯವರೆಗೆ ನಡೆಯುವುದು.

ಸ್ಥಳ – ಗಾಂಧೀ ತೀರ್ಥ, ಜೈನ್ ಹಿಲ್ಸ್, ಜಳಗಾವ್, ಮಹಾರಾಷ್ಟ್ರ.

ಹೇಗೆ ತಲುಪುವುದು – ಹೌರಾ – ಮುಂಬಯಿ, ದಿಲ್ಲಿ – ಮುಂಬಯಿ, ಚೆನ್ನೈ – ಅಹಮದಾಬಾದ್, ತಿರುಚಿನಾಪುರಂ – ದಿಲ್ಲಿ, ಪುರಿ –ಶಿರಡಿ, ರೈಲ್ವೆ ಮಾರ್ಗದಲ್ಲಿರುವ ಜಂಕ್ಷನ್ ಜಳಗಾವ್. ಇಲ್ಲಿ ಎಲ್ಲ ಗಾಡಿಗಳು ನಿಲ್ಲುತ್ತವೆ. ನೀವು ಈಗಲೇ ರೈಲ್ವೆ ರಿಝರ್ವೇಶನ್ ಮಾಡಿಸಿಕೊಳ್ಳಿ.

ನೀವು ಒಂದೆರಡು ದಿನ ಸಮಯ ಇಟ್ಟುಕೊಂಡು ಬನ್ನಿ. ಏಕೆಂದರೆ ನೀವು ಗಾಂಧೀತೀರ್ಥವನ್ನು ಎಲ್ಲ ವಿವರಣೆಯೊಂದಿಗೆ ನೋಡಬಹುದು. ಅಲ್ಲದೆ, ಅಂತರರಾಷ್ಟ್ರೀಯ ಖ್ಯಾತಿಯ ಅಜಂತ, ಎಲ್ಲೋರ ಗುಹಾಂತರ ದೇವಾಲಯಗಳನ್ನೂ ನೋಡಬಹುದು. ಬೇಡಿಕೆ ಇದ್ದಲ್ಲಿ ಅದರ ವ್ಯವಸ್ಥೆಯನ್ನು ಮಾಡಲಾಗುವುದು. ನೀವು ಸಂಸ್ಥೆಯ ಪರವಾಗಿ ಅಥವಾ ವ್ಯಕ್ತಿಗತವಾಗಿ ಎಷ್ಟು ಜನ ಬರುತ್ತೀರಿ ಹಾಗೂ ಯಾವ ದಿನ ಮತ್ತು ಯಾವ ಗಾಡಿಯಿಂದ ಬರುತ್ತೀರಿ ಎಂಬುದನ್ನು ತಿಳಿಸಿರಿ. ನಿಮ್ಮ ಉತ್ತರದ ಪ್ರತೀಕ್ಷೆಯಲ್ಲಿದ್ದೇವೆ.

ಸಂಪರ್ಕ E-mail ID – sevagram_ashram@yahoo.in

೦೯೪೨೨೨೫೩೮೯೧/೯೪೨೧೯೨೩೧೯೫

ಕರ್ನಾಟಕದಲ್ಲಿ ಸಂಪರ್ಕ : ಸುರೇಂದ್ರ ಕೌಲಗಿ, ಮೇಲುಕೋಟೆ ೯೧೪೮೧೭ ೦೦೮೧೨

ಖಾದಿ ವಿಚಾರ



೧೯೨೧ರ ನಂತರ ಗಾಂಧೀಜಿಯವರು ಖಾದಿತಂತ್ರದ ವಿಕಾಸಕ್ಕಾಗಿ ಅನೇಕ ಪ್ರಯತ್ನಗಳನ್ನು ಪ್ರಾರಂಭಮಾಡಿದರು. ಇಪ್ಪತ್ತು ಲಕ್ಷ ಚರಖಾಗಳು ಮನೆಮನೆಯಲ್ಲಿ ನಡೆಸಬೇಕೆಂಬ ಘೋಷಣೆಯ ಜೊತೆಗೆ ಅದರ ವ್ಯವಹಾರಿಕ ಪ್ರಯೋಗದ ಕಡೆಯೂ ಗಮನಕೊಟ್ಟರು. ಅವರು ಜೂನ್ ೧೯೨೧ ರಂದು ತಿಲಕ್ ಸ್ವರಾಜ್ ಫಂಡ್‌ಗಾಗಿ ಒಂದು ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಘೋಷಣೆಮಾಡಿದರು. ಈ ಫಂಡ್‌ಗಾಗಿ ದೊಡ್ಡ ಜನರಿಂದ ದೊಡ್ಡ ಮೊತ್ತದ ದಾನ ತೆಗೆದುಕೊಳ್ಳುವುದರ ಬದಲಾಗಿ ಸಾಧಾರಣ ಜನರಿಂದ ಚಿಕ್ಕ ಚಿಕ್ಕ ದಾನ ಪಡೆದು ಅವರನ್ನು ಈ ಸ್ವದೇಶೀ ಮತ್ತು ಖಾದಿ ಆಂದೋಲನದ ತಂತ್ರದೊಂದಿಗೆ ಜೋಡಿಸಬೇಕೆಂಬುದು ಇದರ ಮುಖ್ಯ ಉದ್ದೇಶವಾಗಿತ್ತು. ಇದಕ್ಕಾಗಿ ಗಾಂಧೀಜಿ ಇಡೀ ದೇಶವನ್ನು ಸುತ್ತಿದರು. ನಂತರ ಅವರು ಮುಂಬಯಿಗೆ ಹೋಗಿ ತಮ್ಮ ಈ ಗುರಿಯನ್ನು ಪೂರ್ಣಗೊಳಿಸಿದರು. ಇದರಲ್ಲಿ ೩/೨ ನೇ ಭಾಗದಷ್ಟು ಹಣವನ್ನು ನೂಲುಗಾರಿಕೆ, ನೇಕಾರಿಕೆ ಮತ್ತು ಶೈಕ್ಷಣಿಕ ಕಾರ್ಯಕ್ರಮದಲ್ಲಿ ತೊಡಗಿಸಲಾಯಿತು. ಏಕೆಂದರೆ ವಿದೇಶೀ ಬಟ್ಟೆ ಬರುವ ಮುಖ್ಯ ಮಾರ್ಗ ಮುಂಬಯಿಯಾಗಿತ್ತು. ಆದ್ದರಿಂದ ಮುಂಬಯಿಯನ್ನು ಕೇಂದ್ರವನ್ನಾಗಿರಿಸಿಕೊಂಡು ಈ ಚಳುವಳಿಯನ್ನು ಆರಂಭಿಸಲಾಯಿತು. ವ್ಯಾಪಾರಿಗಳಿಗೆ ತಿಳುವಳಿಕೆ ಕೊಡಲು ಮಿಲ್ ಮಾಲೀಕರಿಗೂ ಹಾಗೂ ಗ್ರಾಹಕರಿಗೂ ತಿಳುವಳಿಕೆ ಕೊಡುವ ಶ್ರಮ ಮಾಡಲಾಯಿತು. ಒಂದು ವೇಳೆ ಖಾದಿ ದೊರೆಯದಿದ್ದರೆ ಬಟ್ಟೆಯ ಅವಶ್ಯಕತೆಗಳನ್ನು ಕಡಿಮೆ ಮಾಡಿಕೊಳ್ಳಬೇಕೆಂಬ ವಿಚಾರದವರೆಗು ಹೇಳಲಾಯಿತು. ವಿದೇಶೀ ಬಟ್ಟೆಗಳನ್ನು ಸುಟ್ಟು ಬಿಡಬೇಕು ಇಲ್ಲವೇ ವಿದೇಶಗಳಿಗೆ ಹಿಂದಿರುಗಿಸಬೇಕೆಂದು ಗಾಂಧೀಜಿ ಎಲ್ಲರಿಗೂ ತಿಳಿ ಹೇಳಿದರು. ಆದರೆ ಬಡವರಿಗೂ ಕೂಡ ವಿದೇಶೀ ಬಟ್ಟೆಯನ್ನು ಹಂಚುವುದಕ್ಕೆ ಅನುಮತಿಯನ್ನು ಕೊಡಲಾಗುವುದಿಲ್ಲ. ಈ ವಿಷಯದ ಬಗ್ಗೆ ಗಾಂಧೀಜಿ ಸಿ.ಎಫ್.ಹ್ಯಾಂಡ್ರೂಸ್ ಮಧ್ಯೆ ತುಂಬ ಚರ್ಚೆನಡೆಯಿತು. ಬಟ್ಟೆಯನ್ನು ಸುಡುವ ಬದಲಾಗಿ ಬಡವರಿಗೆ ಹಂಚಿ ಬಿಡಬೇಕೆಂದು ಹ್ಯಾಂಡ್ರೂಸ್ ಬಯಸುತ್ತಿದ್ದರು.

ಆದರೆ ಗಾಂಧೀಜಿ ತಮ್ಮ ಮಾತಿನ ಬಗ್ಗೆ ದೃಢ ನಿಶ್ಚಯಿಯಾಗಿದ್ದರು. ವಿದೇಶೀ ಬಟ್ಟೆಗಳನ್ನು ಸುಟ್ಟ ಮೇಲೆಯೇ ನಮ್ಮ ಶುದ್ಧಿ ಆಗುವುದೆಂದು ಹೇಳಿದರು.

ಈ ಎಲ್ಲ ಪ್ರಯೋಗಗಳ ಮೂಲಕ ಗಾಂಧೀಜಿ ತಮ್ಮನ್ನು ಮತ್ತು ದೇಶವನ್ನು ಅಸಹಕಾರ ಆಂದೋಲನಕ್ಕಾಗಿ ಸಿದ್ಧಗೊಳಿಸಿದರು. ಬಾರ್ಡೋಲಿಯಲ್ಲಿ ಅವರು ಮೊಕ್ಕಾಮ್ ಮಾಡಿದರು. ಅಲ್ಲಿಯ ರೈತರ ಸಮಸ್ಯೆಗಳನ್ನು ಎತ್ತಿಕೊಂಡು ಅಸಹಕಾರ ಆಂದೋಲನ ಪ್ರಾರಂಭಿಸಿದರು. ಅಲ್ಲಿಯ ನಾಗರೀಕರಿಗೆ ಖಾದಿ ಮತ್ತು ಚರಕಾದ ಬಗ್ಗೆ ಶಿಕ್ಷಣ ಕೊಡಲಾಗುತ್ತಿತ್ತು. ಅಸಹಕಾರದ ತಯಾರಿಯೆಂದರೆ ನೂಲುಗಾರಿಕೆ ಮತ್ತು ಖಾದಿಯ ಕಾರ್ಯಕ್ರಮಗಳನ್ನು ಅನಿರ್ಬಂಧಿತವಾಗಿ ತೀವ್ರವಾಗಿ ನಡೆಸುವುದೇ ಆಗಿತ್ತು. ಅಸಹಕಾರ ಆಂದೋಲನದ ಪ್ರಾರಂಭ ಜನತೆಯ ಮಧ್ಯೆ ಇದ್ದುಕೊಂಡು ಖಾದಿ ಮತ್ತು ಚರಕಾದ ಪ್ರಚಾರ. ಸ್ವದೇಶಿಯಿಲ್ಲದೇ ಅಸಹಕಾರವೆಂಬುದು ಹುಟ್ಟುವ ಮೊದಲೆ ಸಾಯುವುದು ಎಂಬ ಸ್ಥಿತಿಗೆ ಸಮಾನವೆಂದು ಗಾಂಧೀಜಿ ಹೇಳುತ್ತಿದ್ದರು. ಅಸಹಕಾರ ಆಂದೋಲನ ಖಾದಿ ಆಂದೋಲನಕ್ಕೆ ಗೊಬ್ಬರ ಮತ್ತು ನೀರು ಹಾಕಿದಂತೆ ಎಂದೂ ಹೇಳುತ್ತಿದ್ದರು.

ಜನಪದ ನಿಲಯದ ಅಂತರಂಗದಲ್ಲಿ – ೧೩೬



೧೯೫೮– ೫೯ ಚಳಿಗಾಲದ ದಿನಗಳು. ಮೈಸೂರಿನಿಂದ ತಿಪಟೂರಿಗೆ ಹೋಗುವ ಸಿ.ಪಿ.ಸಿ ಬಸ್ ಜಕ್ಕನಹಳ್ಳಿ ಕ್ರಾಸ್ ಬಳಿ ನಿಂತಿತು. ಆಗ ಸಂಜೆಯ ಐದು ಗಂಟೆಯ ಸಮಯ. ಸ್ವಲ್ಪ ಹೊತ್ತಿನಲ್ಲಿಯೇ ಶ್ರೀನಿವಾಸ್ ಎಂಬ ಬಸ್ಸು ಮಂಡ್ಯದ ಕಡೆಯಿಂದ ಬಂದಿತು. ಅದು ಮೇಲುಕೋಟೆಯ ಮಾರ್ಗವಾಗಿ ಕೃಷ್ಣರಾಜಪೇಟೆಗೆ ಹೋಗುವ ಬಸ್ಸು. ನಾನು ಮತ್ತು ಜಗ್ಗು ನಾರಾಯಣ್ ಶ್ರೀನಿವಾಸ್ ಬಸ್ಸಲ್ಲಿ ಕುಳಿತು ಮೇಲುಕೋಟೆಗೆ ಬಂದೆವು. ಜಕ್ಕನಹಳ್ಳಿಯಿಂದ ಮೇಲುಕೋಟೆಯ ಅಂತರ ಕೇವಲ ಆರು ಕಿಲೋಮೀಟರ್. ಅರ್ಧ ಘಂಟೆಯ ಈ ಚಿಕ್ಕ ಪಯಣ ಮಂಡ್ಯ ಜಿಲ್ಲೆಯಲ್ಲಿ ಗಾಂಧಿ ವಿಚಾರದ ರಚನಾತ್ಮಕ ಕೆಲಸಕ್ಕೆ ಕಾರಣವಾಗುತ್ತದೆಂದು ಅನಿಸಿಯೇ ಇರಲಿಲ್ಲ. ಈಗ ಅರವತ್ತು ವರ್ಷಗಳ ಆ ಹಿಂದಿನ ಘಟನೆಯನ್ನು ನೆನೆಯುತ್ತಾ ಹೋದಂತೆ ಮಂಡ್ಯ ಜಿಲ್ಲೆಯ ಜನತೆಯ ಸ್ನೇಹ, ಸಹಕಾರ ಮತ್ತು ಪ್ರೋತ್ಸಾಹ ನೆನಪಾಗುತ್ತದೆ. ಅವರು ತೋರಿದ ಒಲುಮೆಯ ಕಾರಣದಿಂದಾಗಿ ಜನಪದ ಸೇವಾ ಟ್ರಸ್ಟ್ ಹುಟ್ಟಿ ಬೆಳೆಯಲು ಕಾರಣವಾಯಿತು. ಜನಪದ ಸೇವಾ ಟ್ರಸ್ಟ್ ಸ್ಥಾಪಿತವಾಗಿ ಈಗ್ಗೆ ಅರವತ್ತು ವರ್ಷಗಳಾದವು. ಇಷ್ಟು ದೀರ್ಘಾವಧಿಯ ಸೇವೆಯನ್ನು ಟ್ರಸ್ಟ್ ಮಾಡಿಕೊಂಡು ಬರಲು ಶಕ್ತವಾದುದಕ್ಕೆ ಮಂಡ್ಯ ಜಿಲ್ಲೆಯ ಜನತೆ ತೋರಿದ ಪ್ರೇಮ ಮತ್ತು ಸಹೋದರತ್ವದ ಭಾವನೆಯೇ ಕಾರಣ. ೧೯೬೦ನೇ ಸುಮಾರಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆ ಕಾಲೂರುತ್ತಿತ್ತು. ಬಲವಂತರಾಯ್ ಮೆಹ್ತಾರವರ ಆಯೋಗದ ಶಿಫಾರಸ್ಸಿನಂತೆ ನೆಹರೂಜಿರವರ ಸರ್ಕಾರ ದೇಶಾದ್ಯಂತ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಲು ಪ್ರಾರಂಭಿಸಿತ್ತು. ಅದರಂತೆ ಮೊಟ್ಟ ಮೊದಲ ಬಾರಿಗೆ ರಾಜಸ್ಥಾನದಲ್ಲಿ ನಾಗೌರ್ ಜಿಲ್ಲೆಯಲ್ಲಿ ೧೯೫೦ ಅಕ್ಟೋಬರ್ ೨ರಂದು ಪಂಚಾಯತ್ ರಾಜ್ಯದ ಉದ್ಘಾಟನೆಯಾಯಿತು. ಅದೇ ಸುಮಾರಿಗೆ ಕರ್ನಾಟಕದಲ್ಲಿ ಮಂಡ್ಯ ಜಿಲ್ಲೆಯಲ್ಲಿಯೂ ಪಂಚಾಯತ್ ರಾಜ್ಯದ ಬೀಜಗಳು ಬಿತ್ತಲ್ಪಡುತ್ತಿದ್ದವು. ಪಂಚಾಯತ್ ರಾಜ್ ಕಾನೂನು ಅನುಗುಣವಾಗಿ ರಾಜ್ಯದ ಎಲ್ಲ ಕಡೆ ಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆಗಳು ನಡೆಯುತ್ತಿದ್ದವು. ಅದರಂತೆ ಪಾಂಡವಪುರ ತಾಲ್ಲೂಕಿನಲ್ಲಿ ಕೂಡ ಚುನಾವಣೆಯ ಗಾಳಿ ಬೀಸುತ್ತಿತ್ತು. ಆಗ ಪಾಂಡವಪುರ ತಾಲ್ಲೂಕಿನ ರಾಜಕಾರಣದಲ್ಲಿ ಕಾಂಗ್ರೆಸ್ ಪಕ್ಷ ಒಂದೇ ಪ್ರಬಲವಾಗಿತ್ತು. ಆ ಪಕ್ಷದ ತಾಲ್ಲೂಕು ನಾಯಕರಾದ ಡಿ.ಹಲಗೇಗೌಡ, ಬಿ.ಕೆ.ಕೆಂಚೇಗೌಡ, ಕೆ.ಕೆಂಪೇಗೌಡ ಮತ್ತು ಕೆ.ಬಿ.ನರಸಿಂಹೇಗೌಡ

ಮುಂತಾದವರ ಪರಿಚಯು ನನಗಾಯಿತು. ಸಾಮಾನ್ಯವಾಗಿ ಇವರೆಲ್ಲರೂ ಯುವಾವಸ್ಥೆಯಲ್ಲಿದ್ದರು. ಅಧ್ಯಾಪಕರಾಗಿದ್ದೂ ರಾಜಕಾರಣದಲ್ಲಿ ಆಸಕ್ತಿ ವಹಿಸುತ್ತಿದ್ದರು. ಜನಪದ ಸೇವಾ ಟ್ರಸ್ಟ್ ರೂಪುಗೊಳ್ಳುವ ಸಮಯದಲ್ಲಿ ಇವರೆಲ್ಲರ ಸಹಕಾರವನ್ನು ಪಡೆಯಲಾಯಿತು. ಇವರಲ್ಲಿ ಬಿ.ಕೆ.ಕೆಂಚೇಗೌಡರು ಪೂರ್ಣಸಮಯದ ರಾಜಕೀಯ ಕಾರ್ಯಕರ್ತರಾಗಿದ್ದರು ಮತ್ತು ಉತ್ಸಾಹಿ ತರುಣರು ಮತ್ತು ವಿಚಾರಶೀಲರು ಆಗಿದ್ದರು. ಅವರು ಮೇಲುಕೋಟೆಯ ಬಳಿಯ ಗ್ರಾಮ ಬೆಳ್ಳಾಳೆ ಎಂಬ ಊರಿನವರಾಗಿದ್ದರು. ನನಗೆ ಕೆಂಚೇಗೌಡರ ಪರಿಚಯವಾಯಿತು. ಅವರ ಸ್ನೇಹಪರ ಸ್ವಭಾವದಿಂದ ಪ್ರಭಾವಿತನಾಗಿ ಅವರನ್ನು ಟ್ರಸ್ಟಿನ ಸದಸ್ಯರನ್ನಾಗಿ ತೆಗೆದುಕೊಳ್ಳಲಾಯಿತು ಮತ್ತು ಅವರನ್ನು ಟ್ರಸ್ಟಿನ ಮೊದಲ ಅಧ್ಯಕ್ಷರನ್ನಾಗಿಯೂ ಆಯ್ಕೆಮಾಡಲಾಯಿತು. ಈ ರೀತಿ ಜನಪದ ಸೇವಾ ಟ್ರಸ್ಟ್ ಮಂಡ್ಯದ ಜನ ಜೀವನದೊಂದಿಗೆ ಸಾವಯವ ಸಂಪರ್ಕವನ್ನು ಸಾಧಿಸಿಕೊಂಡಿತು. ಕಾಲ ಕ್ರಮೇಣ ತಾಲ್ಲೂಕಿನ ಇತರ ನಾಯಕರ ಸಹಕಾರವನ್ನು ಪಡೆಯುತ್ತ ಟ್ರಸ್ಟ್ ತನ್ನ ಸೇವಾಕಾರ್ಯವನ್ನು ವಿಸ್ತರಿಸಿಕೊಳ್ಳುತ್ತ ಹೋಯಿತು. ಂಡ್ಯ ಜಿಲ್ಲೆಯಲ್ಲಿ ಆಚಾರ್ಯ ವಿನೋಬಾ ಭಾವೆಯವರು ತಮ್ಮ ಭೂದಾನ ಪಾದಯಾತ್ರೆಯ ಸಂದರ್ಭದಲ್ಲಿ ಮಂಡ್ಯ ಜಿಲ್ಲಾ ಶ್ರೀರಂಗಪಟ್ಟಣ ಮತ್ತು ಪಾಂಡವಪುರ ತಾಲ್ಲೂಕುಗಳಲ್ಲಿಯೂ ಪಾದಯಾತ್ರೆ ಮಾಡಿದ್ದರು. ಮೇಲುಕೋಟೆಯಲ್ಲಿ ಮೂರು ದಿನಗಳ ಕಾಲ ತಂಗಿದ್ದರು. ವಿನೋಬಾರ ಪಾದಯಾತ್ರೆಯ ಕಾರಣದಿಂದಾಗಿ ಅನೇಕ ಜಿಲ್ಲೆಯ ಕಾಂಗ್ರೆಸ್ ಮುಖಂಡರು ಸರ್ವೋದಯ ಆಂದೋಲನದ ಬಗ್ಗೆ ಬಹಿರಂಗವಾಗಿ ಆಸಕ್ತಿ ಪ್ರಕಟಿಸಿದರು. ಅವರಲ್ಲಿ ಮುಖ್ಯರಾದವರು ಕೆ.ವಿ.ಶಂಕರಗೌಡ, ಟಿ.ಮರಿಯಪ್ಪ ಮತ್ತು ಡಾ?ಬಂದೀಗೌಡ ಮುಂತಾದವರು. ಸರ್ವೋದಯ ಆಂದೋಲನದ ಹಿನ್ನೆಲೆಯಿಂದ ಬಂದಿದ್ದ ನನಗೆ ಈ ಮುಖಂಡರ ಪರಿಚಯ ಸಹಜವಾಗಿಯೇ ಆಯಿತು. ನಾನು ಮಂಡ್ಯಕ್ಕೆ ಹೋದಾಗಲೆಲ್ಲ ಶ್ರೀ. ಶಂಕರಗೌಡರನ್ನು ತಪ್ಪದೇ ಭೇಟಿ ಮಾಡುತ್ತಿದ್ದೆ. ಸಾಮಾನ್ಯವಾಗಿ ಅವರ ಭೇಟಿ ಮಂಡ್ಯ ನಗರದ ಮಧ್ಯದಲ್ಲಿರುವ ಅವರೇ ಸ್ಥಾಪಿಸಿದ್ದ ಆರ.ಎ.ಪಿ.ಸಿ.ಎಮ್.ಎಸ್ ಕಟ್ಟಡದ ಹಿಂದಿದ್ದ ಅತಿಥಿ ಗೃಹದಲ್ಲಿ ಆಗುತ್ತಿತ್ತು. ಶಂಕರ ಗೌಡರು ಭೂದಾನ ಕಾರ್ಯಕರ್ತರಾಗಿದ್ದ ಕುಟ್ಟಿಯವರಿಗೆ ಧನ ಸಹಾಯ ಮಾಡುತ್ತಿದ್ದರು.

ಮೇಲುಕೋಟೆ ಮಂಡ್ಯ ಜಿಲ್ಲೆಯಲ್ಲಿಯ ಒಂದು ಪ್ರಮುಖ ಯಾತ್ರಾ ಕ್ಷೇತ್ರ. ಟಿಪ್ಪುಸುಲ್ತಾನ್ ಕಾಲದಿಂದಲೂ ಮೇಲುಕೋಟೆಗೆ ಒಂದಲ್ಲ ಒಂದು ರೀತಿಯಲ್ಲಿ ರಾಜ್ಯಾಶ್ರಯ ದೊರೆಯುತ್ತಾ ಬಂದಿದೆ. ಮೈಸೂರು ಅರಸು ಮನೆತನದ ರಾಜ್ಯದ ಆಡಳಿತಕ್ಕೆ ಒಳಪಟ್ಟಮೇಲೂ ಮೇಲುಕೋಟೆ ರಾಜಮನೆತನದಿಂದ ಬಹಳಷ್ಟು ಪ್ರಯೋಜನ ಪಡೆದಿದೆ. ರಾಜಾಶ್ರಯದ ಕಾರಣದಿಂದಾಗಿ ಮತ್ತು ಅಲ್ಲಿಯ ದೇವಸ್ಥಾನಗಳ ಕಾರಣದಿಂದಾಗಿ ಮೇಲುಕೋಟೆ ಮಂಡ್ಯ ಜಿಲ್ಲೆಯಲ್ಲಿ, ಮುಖ್ಯವಾಗಿ, ಪಾಂಡವಪುರ ತಾಲ್ಲೂಕಿನಲ್ಲಿ ಶೈಕ್ಷಣಿಕವಾಗಿ ಮುಂದುವರಿದ ಗ್ರಾಮವಾಗಿತ್ತು. ಇದಲ್ಲದೆ ಪ್ರಾಚೀನ ಉದ್ಯೋಗವಾದ ಬಟ್ಟೆ ನೇಯ್ಗೆ ಕೈಗಾರಿಕೆಗು ಆಶ್ರಯತಾಣವಾಗಿತ್ತು. ಜಿಲ್ಲೆಯ ಭಕ್ತಾದಿಗಳ ಸಹಕಾರದಿಂದ ಮೇಲುಕೋಟೆಯಲ್ಲಿ "ದಿವ್ಯದೇಶ ಜೀರ್ಣೋದ್ಧಾರಕ ಭಕ್ತ ಮಂಡಲಿ" ಎಂಬ ಸಂಸ್ಥೆಯೊಂದು ಸ್ಥಾಪನೆಯಾಯಿತು. ಆ ಸಂಸ್ಥೆಯ ಉದ್ದೇಶ ಮೇಲುಕೋಟೆಗೆ

ಬರುವ ರಾಜ್ಯದ ಮತ್ತು ಹೊರ ರಾಜ್ಯದ ಭಕ್ತಾದಿಗಳಿಗೆ ಸೌಕರ್ಯವನ್ನು ಕಲ್ಪಿಸಿಕೊಡುವುದಾಗಿತ್ತು. ನಾನು ಮೇಲುಕೋಟೆಗೆ ಬಂದಾಗ ಭಕ್ತ ಮಂಡಲಿಯ ಅಧ್ಯಕ್ಷರಾಗಿ ಬಿ.ವಿ.ರಾಘವಾಚಾರರು ಇದ್ದರು. ಅವರ ಕಾಲದಲ್ಲಿ ಭಕ್ತ ಮಂಡಲಿಯು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಗ್ರಾಮದಲ್ಲಿ ಕಲ್ಯಾಣಿ ಬೀದಿಯಲ್ಲೊಂದು ಮತ್ತು ತೇರು ಬೀದಿಯಲ್ಲೊಂದು ವಸತಿ ಗೃಹಗಳಿದ್ದವು. ದನದ ಆಸ್ಪತ್ರೆಯನ್ನು ಕಟ್ಟಿಸಿ ಕೊಡಲಾಗಿತ್ತು. ಪ್ರೌಢಶಾಲೆಯನ್ನು ಪ್ರಾರಂಭಿಸಿ ಅದಕ್ಕೆ ಕಟ್ಟಡವನ್ನು ಕಟ್ಟಿಸಿ ಕೊಡಲಾಗಿತ್ತು. ಶ್ರೀ.ಯದುಶೈಲ ಪ್ರೌಢಶಾಲೆ ಎಂಬ ಹೆಸರಿನಲ್ಲಿ ಆ ಶಿಕ್ಷಣ ಸಂಸ್ಥೆ ಈಗಲೂ ನಡೆಯುತ್ತಿದೆ. ೧೯೪೭ರಲ್ಲಿ ಪ್ರಾರಂಭವಾದ ಈ ಶಾಲೆಯಲ್ಲಿ ಓದಿದ ಮಂಡ್ಯ ಜಿಲ್ಲೆಯ ವಿವಿಧ ಗ್ರಾಮಗಳ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸ ಮಾಡಿ ಸರ್ಕಾರಿ ಕ್ಷೇತ್ರದಲ್ಲೂ, ರಾಜಕೀಯ ಕ್ಷೇತ್ರದಲ್ಲೂ ಹೆಸರು ಮಾಡಿದ್ದಾರೆ. ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಎಮ್.ಎನ್.ಅನಂತನಾರಾಯಣ ಅಯ್ಯಂಗಾರ್ ಎಂಬುವವರು ಒಳ್ಳೆಯ ಗಮಕಿಗಳೂ, ನಟರೂ, ಸಂಸ್ಕೃತ ಪಂಡಿತರೂ ಆಗಿದ್ದರು. ಅವರನ್ನು ಜಿಲ್ಲೆಯ ಅನೇಕ ವಿದ್ಯಾರ್ಥಿಗಳು ಇನ್ನೂ ನೆನಪಿಸಿಕೊಳ್ಳುತ್ತಾರೆ. ಭಕ್ತ ಮಂಡಲಿಯೊಂದಿಗೆ ಜಿಲ್ಲೆಯ ಸಮಾಜವಾದಿ ಪಕ್ಷದ ನಾಯಕರಾಗಿದ್ದ ಬಿ.ಚಾಮಯ್ಯನವರು ಸಂಪರ್ಕವಿರಿಸಿಕೊಂಡಿದ್ದರು. ಅವರ ಸಮ್ಮುಖದಲ್ಲಿಯೇ ಮಂಡಲಿಯ ಸಭೆಗಳು ನಡೆಯುತ್ತಿದ್ದವು. ಚಾಮಯ್ಯನವರು ಶಾಸಕರೂ ಆಗಿದ್ದರು. ಶ್ರೀ.ಚಾಮಯ್ಯನವರು ಸಮಾಜವಾದಿಯಗಿದ್ದರೂ ಅವರ ವ್ಯವಹಾರಗಳಲ್ಲಿ ಮತ್ತು ಮಾತುಕತೆಗಳಲ್ಲಿ ಸಮಾಜವಾದದ ಶಾಖ ಇರುತ್ತಿರಲಿಲ್ಲ. ಅವರು ಯಾವಾಗಲೂ ಸೌಮ್ಯವಾಗಿರುತ್ತಿದ್ದರು. ಮೆಲುವಾದ ಧ್ವನಿಯಲ್ಲಿ ಮಾತನಾಡುತ್ತಿದ್ದರು. ಆದರೆ ಅವರು ಕೊಡುತ್ತಿದ್ದ ತೀರ್ಮಾನಗಳು ಕರಾರುವಕ್ಕಾಗಿರುತ್ತಿದ್ದವು.

ಜನಪದ ಸೇವಾ ಟ್ರಸ್ಟ್ ಆಶ್ರಯದಲ್ಲಿ ಕೇಂದ್ರೀಯ ಸಮಾಜ ಕಲ್ಯಾಣ ಸಮಿತಿಯ ಧನ ಸಹಾಯದೊಂದಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಂಥ ವಯಸ್ಕ ಮಹಿಳೆಯರಿಗಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಗಾಗಿ, ಎರಡು ವರ್ಷಗಳ ಅವಧಿಯ ಸಂಕ್ಷಿಪ್ತ ಶಿಕ್ಷಣ ಶಾಲೆಯೊಂದನ್ನು ಪ್ರಾರಂಭಿಸಿತು. ಈ ಶಾಲೆಗೆ ಮಂಡ್ಯ ಜಿಲ್ಲೆಯ ಹಲವಾರು ಗ್ರಾಮಗಳಿಂದ ಮಹಿಳೆಯರು ಸೇರಿಕೊಂಡರು. ಅವರು ಎಸ್.ಎಸ್.ಎಲ್.ಸಿ ಪರೀಕ್ಷೆ ಪಾಸಾಗಿ ಅಧ್ಯಾಪಕಿಯರಾಗಿ ಕೆಲಸ ನಿರ್ವಹಿಸಿದರು. ಮುಂದೆ ೧೯೬೩ರಲ್ಲಿ ಪೋಲೀಯೋ ಪೀಡಿತ ಅಂಗವಿಕಲ ಮಕ್ಕಳಿಗಾಗಿಯೇ ಊಟ ವಸತಿ ಸೌಕರ್ಯವುಳ್ಳ ಶಾಲೆಯನ್ನು ಪ್ರಾರಂಭಿಸಲಾಯಿತು. ಅಂಗವಿಕಲ ಮಕ್ಕಳ "ಕರುಣಾಗೃಹ" ಎಂಬ ಈ ಶಾಲೆಗೆ ಜಿಲ್ಲೆಯಲ್ಲಿಯ ಅನೇಕ ಮಕ್ಕಳು ಸೇರಿಕೊಂಡರು. ಅವರಲ್ಲಿ ಅನೇಕ ಮಕ್ಕಳು ವಿದ್ಯಾಭ್ಯಾಸ ಮಾಡಿ ಮುಂದೆ ಸ್ವತಂತ್ರ ಉದ್ಯೋಗ ಪ್ರಾರಂಭಿಸಿ ಮುಂದೆ ಬಂದರು. ಕೆಲವರು ಕ್ರೀಡಾಪಟುಗಳಾಗಿ ಹೆಸರು ಮಾಡಿದರು.

೧೯೯೦ರಲ್ಲಿ ಮೇಲುಕೋಟೆಯಲ್ಲಿ ಅಖಿಲ ಭಾರತ ಸರ್ವೋದಯ ಸಮಾಜ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಇದು ಅಖಿಲ ಭಾರತ ೩೮ನೇ ಸಮ್ಮೇಳನ. ಈ ಸಮ್ಮೇಳನವನ್ನು ಸ್ವತಂತ್ರ ಸೇನಾನಿ ಡಾ?ಉಷಾ ಮೆಹ್ತಾ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಪರಿಸರವಾದಿ ಚಿಪ್ಕೋ ಆಂದೋಲನದ ಸುಂದರಲಾಲ್ ಬಹುಗುಣ ವಹಿಸಿದ್ದರು.

ಸುಮಾರು ೩,೦೦೦ ಜನ ಪ್ರತಿನಿಧಿಗಳು ಈ ಸಮ್ಮೇಳನಕ್ಕೆ ಬಂದಿದ್ದರು. ಸಮ್ಮೇಳನದ ಆಯೋಜನೆಗಾಗಿ ನಿವೃತ್ತ ನ್ಯಾಯಾಧೀಶರಾಗಿದ್ದ ನಿಟ್ಟೂರು ಶ್ರೀನಿವಾಸರಾವ್‌ರವರ ಗೌರವಾಧ್ಯಕ್ಷತೆ, ಶ್ರೀರಂಗಪಟ್ಟಣದ ಡಾ?ಕೆ.ಬಂದೀಗೌಡರ ಕಾರ್ಯಾಧ್ಯಕ್ಷತೆ ಮತ್ತು ಕೆ.ಎಸ್.ಆರ್.ಟಿ.ಸಿ ಚೇರ್ಮನ್ನರಾಗಿದ್ದ ಮಂಡ್ಯ ನಗರದ ಪ್ರಸಿದ್ಧ ವಕೀಲರಾಗಿದ್ದ ಎಮ್.ಲಿಂಗಯ್ಯರವರ ಖಜಾಂಚಿತ್ವ ಮತ್ತು ಸರ್ವೋದಯ ಮುಖಂಡ ಪಿ.ವೆಂಕೋಬರಾವ್ ಮತ್ತು ಗಾಂಧಿ ಶಾಂತಿ ಪ್ರತಿಷ್ಠಾನದ ಕೆ.ಎಸ್.ನಾರಾಯಣ ಸ್ವಾಮಿ ಹಾಗೂ ಇನ್ನೂ ಕೆಲವು ಸದಸ್ಯರ ನೇತೃತ್ವದಲ್ಲಿ ಸಮ್ಮೇಳನ ನಡೆಯಿತು. ಸಮ್ಮೇಳನದ ಸಂಘಟನಾ ಕಾರ್ಯದರ್ಶಿಯಾಗಿ ನಾನು ರಾಜ್ಯಾದ್ಯಂತ ಪ್ರವಾಸ ಮಾಡಿ ಸಮ್ಮೇಳನಕ್ಕೆ ಅಗತ್ಯವಾಗಿ ಬೇಕಿದ್ದ ಹಣವನ್ನು ಸಂಗ್ರಹಿಸಿದೆ. ರಾಜ್ಯದ ಜನರು ಸಂತೋಷವಾಗಿ ಈ ಕಾರ್ಯಕ್ಕೆ ಉದಾರ ಮನಸ್ಸಿನಿಂದ ಸಹಾಯ ಮಾಡಿದರು. ಜಿಲ್ಲೆಯ ಪ್ರತಿಷ್ಠಿತ ಮತ್ತು ಪ್ರಗತಿಪರ ಮಠ ಶ್ರೀ.ಆದಿಚುಂಚನಗಿರಿ ಮಠದ ಗುರುಗಳಾದ ಶ್ರೀ.ಶ್ರೀ.ಬಾಲಗಂಗಾಧರ ನಾಥ ಸ್ವಾಮೀಜಿಯವರು ಕೂಡ ಪ್ರತಿನಿಧಿಗಳ ಊಟೋಪಚಾರದ ವಿಷಯದಲ್ಲಿ ಸಹಾಯ ಮಾಡಿದರು. ಎಲ್ಲರ ಸಹಕಾರದ ಕಾರಣದಿಂದಾಗಿ ಸಮ್ಮೇಳನವು ಯಶಸ್ವಿಯಾಗಿ ನಡೆಯಿತು. ಕೆಲವು ಸಾವಿರ ರೂಪಾಯಿಗಳ ಉಳಿತಾಯವೂ ಆಯಿತು. ಕರ್ನಾಟಕದಲ್ಲಿ ಮತ್ತು ವಿಶೇಷವಾಗಿ ಮಂಡ್ಯ, ಮೈಸೂರು, ಹಾಸನ ಜಿಲ್ಲೆಗಳಲ್ಲಿ ಸರ್ವೋದಯ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕೆಂದೇ ಸಂಸ್ಥೆಯೊಂದನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು. ಅಂಥ ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ ಸಮ್ಮೇಳನದ ಉಳಿತಾಯದ ಹಣವನ್ನು ವರ್ಗಾಯಿಸಬೇಕೆಂದು ತೀರ್ಮಾನಿಸಲಾಯಿತು. ಆ ಸಂಸ್ಥೆಗೆ ಗಾಂಧಿ ಸರ್ವೋದಯ ವಿಚಾರ ವೇದಿಕೆ ಎಂದು ಹೆಸರಿಡಲಾಯಿತು. ಈ ಸಂಸ್ಥೆಗೆ ಡಾ?ಬಂದೀಗೌಡರು ರವರನ್ನು ಅಧ್ಯಕ್ಷರನ್ನಾಗಿ ಮಾಡಲಾಯಿತು. ನಾನು ಅದರ ಕಾರ್ಯದರ್ಶಿಯಾದೆ. ಕೆಲ ಸಮಯದ ನಂತರ ನಾನು ರಾಜೀನಾಮೆ ಕೊಟ್ಟೆ. ಈಗಲೂ ಆ ಸಂಸ್ಥೆ ಮಲನಾಯಕನ ಕಟ್ಟೆ ಬಿ.ಬೋರೇಗೌಡರ ಕಾರ್ಯದರ್ಶಿತ್ವದಲ್ಲಿ ಅಸ್ತಿತ್ವದಲ್ಲಿದೆ.

ಮತದಾರರಲ್ಲಿ ಜಾಗೃತಿಯನ್ನು ಉಂಟುಮಾಡಬೇಕು, ಆಯ್ಕೆಗೊಂಡ ಅಭ್ಯರ್ಥಿಯ ಮೇಲೆ ಮತದಾರರ ನಿಯಂತ್ರಣವಿರಬೇಕು, ಚುನಾವಣೆ ಭ್ರಷ್ಟಾಚಾರದಿಂದ ಮುಕ್ತವಾಗಿರಬೇಕು ಮತ್ತು ಮತದಾರನಿಗೆ ತಾನು ಈ ದೇಶದ ಪ್ರಭು ಎಂಬ ಭಾವನೆ ಮೂಡಬೇಕು ಎಂಬಿತ್ಯಾದಿ ವಿಚಾರಗಳಿಂದ "ಮಂಡ್ಯ ಜಿಲ್ಲಾ ಪಕ್ಷಾತೀತ ಮತದಾರರ ವೇದಿಕೆ" ಯನ್ನು ಪ್ರಾರಂಭಿಸಲಾಯಿತು. ಸಾರ್ವತ್ರಿಕ ಚುನಾವಣಾ ಕಾಲದಲ್ಲಿ ಜಿಲ್ಲೆಯಲ್ಲೆಲ್ಲಾ ಸುತ್ತಾಡಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಲಾಗುತ್ತಿತ್ತು. ಒಂದೇ ವೇದಿಕೆಯ ಮೇಲೆ ಎಲ್ಲ ರಾಜಕೀಯ ಪಕ್ಷಗಳ ಉಮೇದುವಾರರನ್ನು ಸೇರಿಸಿ ಪ್ರಚಾರ ಭಾಷಣ ಮಾಡಿಸಲಾಗುತ್ತಿತ್ತು. ಅನೇಕ ಸಲ ಅಭ್ಯರ್ಥಿಗಳಿಂದ ಅವರ ಸದ್ಯದ ಆಸ್ತಿಯ ವಿವರಣೆಯನ್ನು ಪಡೆಯಲಾಗುತ್ತಿತ್ತು. ವೇದಿಕೆಯ ಈ ಕಾರ್ಯಕ್ರಮಕ್ಕೆ ಒಳ್ಳೆಯ ಪ್ರೋತ್ಸಾಹ ದೊರಕಿತು. ವೇದಿಕೆಯ ವಿಚಾರಗಳನ್ನು ಜನ ಮೆಚ್ಚಿ ತಮ್ಮ ಬೆಂಬಲ ಕೊಡುತ್ತಿದ್ದರು. ಜಿಲ್ಲೆಯ ಅನೇಕ ಯುವಕರು ಈ ವೇದಿಕೆಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಈ ವೇದಿಕೆ ಬೆಳೆದು ರಾಜ್ಯದಲ್ಲೇ ಒಂದು ಪ್ರಮುಖ ರಾಜಕೀಯ

ಬೆಳವಣಿಗೆಯಾಗಬಹುದಿತ್ತು. ಆದರೆ ಸಂಘಟನೆಯಲ್ಲಿನ ಕೆಲ ಲೋಪದೋಷಗಳ ಕಾರಣದಿಂದ ವೇದಿಕೆ ಉಚ್ಛ್ರಾಯ ಸ್ಥಿತಿ ಮುಟ್ಟಲಿಲ್ಲ. ಇದೊಂದು ಜಿಲ್ಲೆಯ ಮಟ್ಟಿಗೆ ದೊಡ್ಡ ರಾಜಕೀಯ ದುರಂತವೆಂದೇ ಹೇಳಬಹುದು. ವೇದಿಕೆ ಅಸ್ತಿತ್ವದಲ್ಲಿದ್ದಷ್ಟು ಕಾಲ ಜಿಲ್ಲೆಯ ರಾಜಕಾರಣದ ಮೇಲೆ ಗಾಢವಾದ ಪ್ರಭಾವ ಬೀರಿದ್ದರಲ್ಲಿ ಸಂದೇಹವಿಲ್ಲ. ವೇದಿಕೆ ಅಸ್ತಿತ್ವ ಕಳೆದುಕೊಂಡು ಹಲವಾರು ವರ್ಷಗಳಾದರೂ ಜಿಲ್ಲೆಯಲ್ಲಿ ಈಗಲೂ ಕೆಲವು ಜನ ವೇದಿಕೆಯ ರಾಜಕೀಯ ಚಟುವಟಿಕೆಗಳನ್ನು ನೆನಪಿಸಿಕೊಳ್ಳುತ್ತಾರೆ. ಅದು ಇಲ್ಲವಾದುದಕ್ಕೆ ವ್ಯಥೆ ಪಡುತ್ತಾರೆ.

ಜನಪದ ಸೇವಾ ಟ್ರಸ್ಟಿನ ಕಾರ್ಯಚಟುವಟಿಕೆಗಳ ಕಾರಣದಿಂದಾಗಿ ಮಂಡ್ಯ ಜಿಲ್ಲೆಯ ಅನೇಕ ಹಿರಿಯ ವ್ಯಕ್ತಿಗಳೊಂದಿಗೆ ನನಗೆ ಸಂಪರ್ಕ ಬಂದಿತು. ಅವರಲ್ಲಿ ಒಬ್ಬರು ಶ್ರೀ.ಕೆ.ಬೆಟ್ಟಶೆಟ್ಟಿ, ಮಂಡ್ಯ ನಗರ ಬಳಿ ಇರುವ ಕ್ಯಾತಮ್‌ಗೆರೆ ಗ್ರಾಮದ ದೊಡ್ಡ ಸಾಹುಕಾರರು ಮತ್ತು ಜಮೀನ್ದಾರರು. ಈ ಮನೆತನದವರು ದಾನ ಧರ್ಮಗಳಿಗೆ ಹೆಸರಾದವರು. ಮಂಡ್ಯ ನಗರದಲ್ಲಿ ಶಾಲಾ ಕಟ್ಟಡವನ್ನು ಕಟ್ಟಿಸಿಕೊಟ್ಟಿದ್ದಾರೆ. ಇಂಥ ಸಮಾಜ ಸೇವಾಮುಖಿ ಮನೆತನದ ವ್ಯಕ್ತಿ ಬೆಟ್ಟಶೆಟ್ರು. ಮಂಡ್ಯ ಜಿಲ್ಲೆಯ ಕಾಂಗ್ರೆಸ್ ನಾಯಕರಾಗಿದ್ದ ಕೆ.ವಿ.ಶಂಕರಗೌಡರ ಬಲಗೈ ಭಂಟನಾಗಿ ಸಾರ್ವಜನಿಕ ಕೆಲಸದಲ್ಲಿ ಭಾಗವಹಿಸುತ್ತಿದ್ದರು. ಸಹಜವಾಗಿಯೇ ಬೆಟ್ಟಶೆಟ್ಟರ ಪರಿಚಯವಾಯಿತು. ಅವರು ವಿನೋಬಾ, ಜಯಪ್ರಕಾಶ್ ನಾರಾಯಣರ ಅಭಿಮಾನಿಯಾಗಿದ್ದರು. ಅವರ ಮನೆಗೆ ಆಗಾಗ್ಗೆ ವಿನೋಬಾ ಭಾವೆಯವರ ಶಿಷ್ಯರಾಗಿದ್ದ ಮೇಲುಕೋಟೆಯ ಅಯ್ಯರ್ ಮತ್ತು ಕುಟ್ಟಿ ಹೋಗುತ್ತಿದ್ದರು. ಮತ್ತು ಅವರ ಮನೆಯಲ್ಲಿ ಹಲವಾರು ದಿನ ಇದ್ದು ಕಾಲಕ್ಷೇಪ ಮಾಡುತ್ತಿದ್ದರು. ನಾನೂ ಸಹ ಮಂಡ್ಯಕ್ಕೆ ಹೋದಾಗಲೆಲ್ಲ ಬೆಟ್ಟಶೆಟ್ಟರನ್ನು ಭೇಟಿ ಮಾಡುತ್ತಿದ್ದೆ. ಅವರು ನನ್ನ ಕೆಲಸಕ್ಕೆ ಪ್ರೋತ್ಸಾಹ ಕೊಡುತ್ತಿದ್ದರು. ಎರಡನೆಯ ಹಿರಿಯ ವ್ಯಕ್ತಿ ಶ್ರೀ.ಎಸ್.ಹೊನ್ನಯ್ಯನವರು. ಇವರು ಜಿಲ್ಲೆಯ ದಲಿತ ಮುಖಂಡರಾಗಿ ಹೆಸರು ಮಾಡಿದ್ದರು. ಮಂಡ್ಯ ಪೌರಸಭೆಯ ಅಧ್ಯಕ್ಷರಾಗಿಯೂ ಆಯ್ಕೆಯಾಗಿ ಸಾರ್ವಜನಿಕ ಕೆಲಸ ಮಾಡಿದ್ದರು. ಜಿಲ್ಲೆಯ ಯಾವುದೇ ಗ್ರಾಮದಲ್ಲಿ ದಲಿತರ ಮೇಲೆ ಯಾವುದೇ ಕಾರಣಕ್ಕೆ ದೌರ್ಜನ್ಯ ನಡೆದರೆ ಅದನ್ನು ಪ್ರತಿಭಟಿಸುವುದರಲ್ಲಿ ಅವರು ಮೊದಲಿಗರಾಗಿರುತ್ತಿದ್ದರು. ತಮ್ಮ ಪ್ರತಿಭಟನಾ ಕಾರ್ಯದಲ್ಲಿ ಕೈ ಜೋಡಿಸುವಂತೆ ಸರ್ವೋದಯ ಕಾರ್ಯಕರ್ತರಾದ ನನ್ನನ್ನು, ಹೆಚ್.ಎಸ್.ದೊರೆಸ್ವಾಮಿಯವರನ್ನು ಇನ್ನು ಹಲವಾರು ಪ್ರಗತಿಪರ ಚಿಂತಕರನ್ನು ಕರೆಯುತ್ತಿದ್ದರು. ನಾವೆಲ್ಲ ಹೊನ್ನಯ್ಯನವರ ಮಾರ್ಗದರ್ಶನದಲ್ಲಿ ಪ್ರತಿಭಟನಾ ಕಾರ್ಯಕ್ರಮವನ್ನು ನಡೆಸುತ್ತಿದ್ದೆವು. ಹೊನ್ನಯ್ಯನವರಿಗೆ ಗಾಂಧೀಜಿಯವರ ಬಗ್ಗೆ ಅಭಿಮಾನವಿತ್ತು. ಆದ್ದರಿಂದ ಪೂನಾ ಒಪ್ಪಂದದ ಸಂದರ್ಭದಲ್ಲಿ ಗಾಂಧೀ ಮತ್ತು ಅಂಬೇಡ್ಕರರ ನಿಲುವಿನ ಬಗ್ಗೆ ನನ್ನೊಂದಿಗೆ ಚರ್ಚೆ ಮಾಡುತ್ತಿದ್ದರು. ಹೊನ್ನಯ್ಯನವರು ಪ್ರತಿವರ್ಷ ಪಶ್ಚಿಮ ವಾಹಿನಿಯಲ್ಲಿ ನಡೆಯುವ ಸರ್ವೋದಯ ಮೇಳಕ್ಕೆ ತಪ್ಪದೆ ಬರುತ್ತಿದ್ದರು. ಆಗ ಸಭೆಯಲ್ಲಿ ಮತ್ತು ಊಟದ ಪಂಕ್ತಿಯಲ್ಲಿ ಅಕ್ಕ-ಪಕ್ಕ ಕುಳಿತುಕೊಂಡಿರುತ್ತಿದ್ದೆವು. ಬಹುವಾಗಿ ಚರ್ಚೆ ಮಾಡುತ್ತಿದ್ದೆವು.

ಮೂರನೆಯ ವ್ಯಕ್ತಿ ಶ್ರೀ.ಹೆಚ್.ಎಲ್.ಕೇಶವಮೂರ್ತಿ. ಇವರು ಮಂಡ್ಯ ಜಿಲ್ಲೆಯ

ಪ್ರಗತಿಪರ ಚಿಂತಕರಲ್ಲಿ ಒಬ್ಬರು. ಮಂಡ್ಯ ನಗರದಲ್ಲಿ ಶ್ರೀಮತಿ.ಮಹಾದೇವಿ ತಾಯಿ ಲಿಗಾಡೆಯವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಏರ್ಪಾಡಾಗಿದ್ದ ಸಂದರ್ಭದಲ್ಲಿ ನನಗೆ ಕೇಶವಮೂರ್ತಿಯವರ ಪರಿಚಯವಾಯಿತು. ಆಗ ಅವರು ಸ್ಫುರದ್ರೂಪಿ, ಉತ್ಸಾಹಿ ಯುವಕ. ಸಮ್ಮೇಳನದ ಪ್ರಧಾನ ಸಂಘಟಕರಲ್ಲಿ ಒಬ್ಬರಾಗಿದ್ದುದರಿಂದ ಅವರಿಗೆ ಬಿಡುವಿಲ್ಲದ ಓಡಾಟ. ಅವರನ್ನು ನಾನು ಪರಿಚಯಮಾಡಿಕೊಂಡೆ ಮತ್ತು ನನ್ನ ಸಹಾಯದ ಹಸ್ತ ಕೊಟ್ಟೆ, ಟ್ರಸ್ಟ್ ಮೇಲುಕೋಟೆಯಲ್ಲಿ ನಡೆಸುತ್ತಿದ್ದ ಕನ್‌ಡೆನ್‌ಸಡ್ ಕೋರ್ಸ್ ವಿದ್ಯಾರ್ಥಿನಿಯರನ್ನು ಸಾಹಿತ್ಯ ಸಮ್ಮೇಳನಕ್ಕೆ ಸ್ವಯಂ ಸೇವಕಿಯರನ್ನಾಗಿ ಕರೆದುಕೊಂಡು ಬಂದು ಭಾಗವಹಿಸಿದೆ. ಆಗ ಕೇಶವಮೂರ್ತಿಯವರೊಂದಿಗೆ ಉಂಟಾದ ಪರಿಚಯ ಕ್ರಮೇಣ ಹೆಚ್ಚು ಆತ್ಮೀಯವಾಗುತ್ತಾ ಹೋಯಿತು. ಜಿಲ್ಲೆಯ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ, ಚಳುವಳಿಗಳಲ್ಲಿ ಅವರೊಂದಿಗೆ ಭಾಗವಹಿಸುವ ಅವಕಾಶ ದೊರೆಯುತ್ತಾ ಹೋಯಿತು. ಈಗಲೂ ಅವರೊಂದಿಗೆ ಜನಪದ ಸೇವಾ ಟ್ರಸ್ಟಿನ ನಿಕಟ ಸಂಪರ್ಕವಿದೆ.

ಸದ್ಯ ಮಂಡ್ಯ ಜಿಲ್ಲೆಯಿಂದ ಲೋಕಸಭೆಗೆ ಆಯ್ಕೆಯಾಗಿರುವ ಶ್ರೀ.ಸಿ.ಎಸ್.ಪುಟ್ಟರಾಜು ಟ್ರಸ್ಟ್ ಕೆಲಸಕ್ಕೆ ಪರೋಕ್ಷವಾಗಿ ನೆರವು ಕೊಡುತ್ತಾ ಬಂದಿದ್ದಾರೆ. ೧೯೯೭ರಲ್ಲಿ ಸ್ವಾತಂತ್ರ್ಯ ಉತ್ಸವದ ೫೦ನೇ ವರ್ಷದ ದಿನಾಚರಣೆಯನ್ನು ಆಚರಿಸುವ ಸಂದರ್ಭದಲ್ಲಿ ನಾನು ಕೈಗೊಂಡಿದ್ದ ಪಾಂಡವಪುರ ತಾಲ್ಲೂಕು ಗ್ರಾಮ ಸ್ವರಾಜ್ಯ ಪಾದಯಾತ್ರೆಯನ್ನು ಸಂಘಟಿಸಿಕೊಡುವುದರಲ್ಲಿ ಶ್ರೀ.ಪುಟ್ಟರಾಜುರವರು ತುಂಬಾ ಸಹಾಯ ಮಾಡಿದರು. ಪಾದಯಾತ್ರೆ ನಡೆದ ಪ್ರದೇಶದಲ್ಲೆಲ್ಲಾ ಪುಟ್ಟರಾಜುರವರ ಅಭಿಮಾನಿ ಸ್ನೇಹಿತರು ಎಲ್ಲ ಬಗೆಯ ಸಹಾಯ ನೀಡಿ ಯಾತ್ರೆಯನ್ನು ಯಶಸ್ವಿಗೊಳಿಸಿದರು. ಈ ಕಾರಣಕ್ಕಾಗಿ ನಾನು ಪುಟ್ಟರಾಜುರವರಿಗೆ ಸದಾ ಆಭಾರಿಯಾಗಿರುತ್ತೇನೆ.

ಮಂಡ್ಯ ಜಿಲ್ಲೆಯಲ್ಲಿ ಮಹಾತ್ಮ ಗಾಂಧೀಜಿಯವರು ಪ್ರತಿಪಾದಿಸಿದ್ದ ರಚನಾತ್ಮಕ ಕಾರ್ಯಕ್ರಮಗಳು ನಡೆದುಕೊಂಡು ಬಂದದ್ದು ಜಿಲ್ಲೆಯ ಸಾರ್ವಜನಿಕ ಕ್ಷೇತ್ರದ ಇತಿಹಾಸದಲ್ಲಿ ದಾಖಲಿಸಬಹುದಾದ ಸಂಗತಿ. ಇದು ನಡೆದದ್ದು ಅರವತ್ತರ ದಶಕಗಳಲ್ಲಿ ಅಂದರೆ ಮಂಡ್ಯ ಜಿಲ್ಲೆಯ ರಚನೆಯಾಗಿ ಸುಮಾರು ೨೧ ವರ್ಷಗಳ ನಂತರ. ಅಲ್ಲಿಯವರೆಗೆ ಹಳೆಯ ಮೈಸೂರು ರಾಜ್ಯದಲ್ಲಿ ಗ್ರಾಮೀಣ ಅಭಿವೃದ್ಧಿಯ ಕೆಲಸ ವಿಶ್ವೇಶ್ವರಯ್ಯ ಗ್ರಾಮೀಣ ಕೈಗಾರಿಕಾ ಸಹಕಾರ ಸಂಘಗಳ ಮೂಲಕ ಮತ್ತು ವಯಸ್ಕ ಶಿಕ್ಷಣ ಸಮಿತಿ ಮೂಲಕ ನಡೆಯುತ್ತಿತ್ತು. ಆ ಯೋಜನೆಗೆ ಸ್ಥಳೀಯ ಸರ್ಕಾರದ ನೆರವು ಇತ್ತು. ಅದಕ್ಕೂ ಮೊದಲು ೧೯೩೦ರ ದಶಕಗಳಲ್ಲಿ ಮೈಸೂರು ರಾಜ್ಯದ ಕೆಲವು ಹಳ್ಳಿಗಳಲ್ಲಿ ಖಾದಿ ಕೆಲಸ ನಡೆಯುತ್ತಿತ್ತು. ಮೈಸೂರು ಜಿಲ್ಲೆಯಲ್ಲಿ ತಗಡೂರು ಮತ್ತು ಬದನವಾಳು ಎಂಬ ಗ್ರಾಮಗಳಲ್ಲಿ ಖಾದಿ ನೂಲು ಮತ್ತು ಬಟ್ಟೆ ಉತ್ಪಾದನೆ ನಡೆಯುತ್ತಿತ್ತು. ಆ ಗ್ರಾಮಗಳಿಗೆ ಗಾಂಧೀಜಿ ಭೇಟಿ ಕೊಟ್ಟಿದ್ದರು. ತಗಡೂರಿನ ರಾಮಚಂದ್ರರಾವ್ ಅಲ್ಲಿಯ ಖಾದಿ ಕೆಲಸವನ್ನು ಬಹಳ ಕಾಲದವರೆಗೆ ನಡೆಸಿಕೊಂಡು ಬಂದರು. ಈಗ ಬದನವಾಳನಲ್ಲಿ ಕರ್ನಾಟಕ ಸರ್ವೋದಯ ಸಂಗ ಎಂಬ ಸಂಸ್ಥೆಯು ಖಾದಿ ಕೆಲಸವನ್ನು ನಡೆಸಿಕೊಂಡು ಬರುತ್ತಿದೆ. ಬದನವಾಳನಲ್ಲಿ ಹೊಳೆನರಸೀಪುರ ತಾಲ್ಲೂಕು ಖಾದಿ

ಸಹಕಾರ ಸಂಘ ನಡೆಸಿಕೊಂಡು ಬರುತ್ತಿದೆ. ನಂತರ ೫೦ರ ದಶಕಗಳಲ್ಲಿ ಕೆ.ವಿ.ಶಂಕರಗೌಡರು ತಮ್ಮ ಸ್ವಗ್ರಾಮವಾದ ಮಂಡ್ಯ ಬಳಿಯ ಕಿಲಾರದಲ್ಲಿ ಖಾದಿ ಕೆಲಸ ಪ್ರಾರಂಭಿಸಿದರು. ಈಗ ಆ ಕೆಲಸ ಸ್ಥಗಿತಗೊಂಡಿದೆ. ಇಷ್ಟು ಮಾತ್ರ ಗಾಂಧಿ ಪ್ರಣೀತ ರಚನಾತ್ಮಕ ಕಾರ್ಯದ ಇತಿಹಾಸವಿರುವ ಮಂಡ್ಯ ಜಿಲ್ಲೆಯಲ್ಲಿ ೧೯೬೦ರಲ್ಲಿ ಜನಪದ ಸೇವಾ ಟ್ರಸ್ಟ್ ಸ್ಥಾಪನೆಯಾದ ನಂತರದಿಂದ ಮತ್ತೆ ರಚನಾತ್ಮಕ ಕಾರ್ಯಗಳು ಪ್ರಾರಂಭವಾದವು. ಜನಪದ ಸೇವಾ ಟ್ರಸ್ಟ್ ಗಾಂಧಿ ವಿಚಾರದ ಆಧಾರದ ಮೇಲೆ ಸ್ವಯಂ ಸೇವಾ ಸಂಸ್ಥೆಯಾಗಿ ರೂಪುಗೊಂಡಿತು. ಆದ್ದರಿಂದ ಟ್ರಸ್ಟ್ ಪ್ರಾರಂಭದಿಂದಲೂ ಜನರ ಸಹಕಾರದಿಂದಲೇ ಕೆಲಸ ಮಾಡುತ್ತಾ ಬಂದಿತು. ಸಂಸ್ಥೆಯ ಕೆಲಸಕ್ಕೆ ಅಗತ್ಯವಾದ ಆರ್ಥಿಕ ನೆರವನ್ನು ಜನತೆಯೇ ಕೊಟ್ಟಿತು. ಅದು ಕೈಗೊಂಡ ಕಾರ್ಯಕ್ರಮಗಳಿಗೆ ತಾತ್ಕಾಲಿಕವಾಗಿ ಸಹಾಯವನ್ನು ಸರ್ಕಾರದಿಂದ ಪಡೆಯಲಾಗುತ್ತಿತ್ತು. ಆದರೆ ಮೂಲತಹ ಜನತೆಯ ಸಹಾಯದಿಂದಲೇ ಕಾರ್ಯಗಳು ನಡೆಯುತ್ತಿದ್ದವು. ಟ್ರಸ್ಟ್ ಕೈಗೊಂಡ ಕೆಲ ಕಾರ್ಯಕ್ರಮಗಳು ಇಂತಿದ್ದವು;

೧. ರಾಷ್ಟ್ರ ಸೇವಾ ದಳ; ೨. ಯುವಕ ಹಿತ ಕೇಂದ್ರ; ೩. ವಯಸ್ಕರ ಶಿಕ್ಷಣ ಕೇಂದ್ರಗಳು; ೪. ಶಿಶು ವಿಹಾರಗಳು; ೫. ಜನಪದ ಪ್ರಾಥಮಿಕ ವಿದ್ಯಾಲಯ; ೬. ಪದವಿಪೂರ್ವ ಕಾಲೇಜು; ೭. ಮುದ್ರಣ ತರಭೇತಿ ಕೇಂದ್ರ; ೮. ಬುದ್ಧಿ ಮಾಂದ್ಯರ ಸೇವಾ ಕೇಂದ್ರ; ೯. ಸರ್ವೋದಯ ಪಾತ್ರೆ ಆಂದೋಲನ; ೧೦. ಖಾದಿ ಉತ್ಪಾದನೆ ಮತ್ತು ಮಾರಾಟ; ೧೧. ಮದ್ಯಪಾನ ನಿಷೇಧ ಚಳುವಳಿ, ಮತದಾರ ಜಾಗೃತ ಚಳುವಳಿ ಮುಂತಾದ ಸಾರ್ವಜನಿಕ ಚಳುವಳಿಗಳು; ೧೨. ಹೊಸ ಜೀವನ ದಾರಿ ಎಂಬ ಪುನರ್‌ವಸತಿ ಕೇಂದ್ರ; ೧೩. ಜನಪದ ವಿಚಾರ ಎಂಬ ವೈಚಾರಿಕ ಮಾಸ ಪತ್ರಿಕೆ.

ಈ ರೀತಿ ಗಾಂಧೀ ವಿಚಾರದ ಚಟುವಟಿಕೆಗಳಲ್ಲದೆ ಮೇಲುಕೋಟೆಗೆ ಆಚಾರ್ಯ ವಿನೋಬಾ ಭಾವೆಯವರ ಭೇಟಿ, ಲೋಕನಾಯಕ ಜಯಪ್ರಕಾಶ್ ನಾರಾಯಣರ ಭೇಟಿ, ಸಮಾಜವಾದಿ ನಾಯಕ ಗಂಗಾಶರಣ್ ಸಿನ್ಹಾ ರವರ ಭೇಟಿ, ಸರ್ವೋದಯ ನಾಯಕರಾದ ಠಾಕೂರ್‌ದಾಸ್ ಭಂಗ್ ಮುಂತಾದ ನಾಯಕರ ಭೇಟಿ ಮಂಡ್ಯ ಜಿಲ್ಲೆಯ ಸಾರ್ವಜನಿಕ ಜೀವನದ ಪ್ರಮುಖ ಸಂಗತಿಗಳಾದವು. ಜನಪದ ಸೇವಾ ಟ್ರಸ್ಟಿನ ಮೂಲಕ ಕೈಗೊಂಡ ಸೇವೆಗಳಿಗೆ ೫೪ ವರ್ಷಗಳಾದವು. ಟ್ರಸ್ಟ್ ಮೂಲಕ ಕೈಗೊಳ್ಳಲಾದ ಸೇವಾ ಕಾರ್ಯಗಳನ್ನು ಗುರುತಿಸಿ ಜಮ್ನಾಲಾಲ್ ಬಜಾಜ್ ಎಂಬ ರಾಷ್ಟ್ರೀಯ ಪ್ರಶಸ್ತಿ ಕೊಡಲ್ಪಟ್ಟಿತು. ಈ ಪ್ರಶಸ್ತಿ ೧೦ಲಕ್ಷ ರೂಗಳ ಮೌಲ್ಯದ್ದಾಗಿದೆ. ಈ ಪ್ರಶಸ್ತಿಯಲ್ಲದೆ ಇನ್ನೂ ಹಲವಾರು ಪ್ರಶಸ್ತಿಗಳು ಕೊಡಲ್ಪಟ್ಟಿವೆ. ಅವುಗಳಲ್ಲಿ ಮಂಡ್ಯ ಜಿಲ್ಲೆಯದೇ ಆದ ಇಂಡವಾಳು ದೇವಮ್ಮ ಮತ್ತು ಹೆಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿಯೂ ಕೂಡ ಒಂದು. ಈ ಪ್ರಶಸ್ತಿ ಮೂಲಕ ಮಂಡ್ಯ ಜಿಲ್ಲೆಯ ಜನತೆ ಟ್ರಸ್ಟಿನ ಕೆಲಸಕ್ಕೆ ತನ್ನ ಮನ್ನಣೆಯನ್ನು ಕೊಟ್ಟಿತೆಂದು ದೃಢವಾಗಿ ಭಾವಿಸಬಹುದಾಗಿದೆ. ಜನಪದ ಸೇವಾ ಟ್ರಸ್ಟ್ ಮಂಡ್ಯ ಜನತೆಗೆ ಆಭಾರಿಯಾಗಿದ.

ಪ್ರತಿಧ್ವನಿ

ಧಾರ್ಮಿಕ ಭಯೋತ್ಪಾದಕರಿವರು

ಶ್ರದ್ಧಾ ವಿಷಯಗಳನ್ನು ಪ್ರಶ್ನಿಸುವುದು, ಟೀಕಿಸುವುದೇ ಇತ್ತೀಚಿನ ಫ್ಯಾಷನ್ ಆಗಿದೆ. ಶಾಂತಿ-ಸಂಯಮಗಳಿಗೆ ಹೆಸರಾದ ಹಿಂದು ಧರ್ಮ ಹಿಂದೆ ಅನ್ಯಧರ್ಮೀಯರಿಂದ ಧಾಳಿಗೊಳಗಾಗುತ್ತಿದ್ದುದು ಇತಿಹಾಸ.

ಈಗ ಸ್ವಧರ್ಮೀಯರೇ ತಮ್ಮ ಪ್ರಚಾರಕ್ಕೋಸ್ಕರ, ನಾಲಿಗೆ ಚಪಲಕ್ಕೋಸ್ಕರ ಬುದ್ಧಿಜೀವಿಗಳೆಂಬ ಫೋಸ್ ಕೊಟ್ಟು ತಮ್ಮದೇ ಮಾತೃಧರ್ಮವನ್ನು, ಅದರ ಆಚಾರ-ವಿಚಾರಗಳನ್ನು ಅಭ್ಯಸಿಸದೇ ಟೀಕಿಸುತ್ತಿರುವುದು ಬೇಸರದ ಸಂಗತಿ.

ಒಂದು ಹಂತದಲ್ಲಿ ಭಗವದ್ಗೀತೆಯನ್ನು, ಅದರಲ್ಲಿರುವ ಸಾರವನ್ನು ತಮ್ಮ ಮೂಗಿನ ನೇರಕ್ಕೆ ಅರ್ಥೈಸಿಕೊಂಡು ಕಂಡ-ಕಂಡಲ್ಲಿ ಟೀಕಿಸಿದ್ದಾಯಿತು. ಭಗವದ್ಗೀತೆಯನ್ನು ಸುಡುವ ಕರೆ ಕೊಟ್ಟಿದ್ದೂ ಆಯಿತು. ಇವರ ಎಲ್ಲಾ ಪಂಥಗಳನ್ನು ಸ್ವೀಕರಿಸಿ ಪ್ರಶ್ನೆಗಳಿಗೆ ಉತ್ತರಿಸಲೆಂದೇ ಮೈಸೂರಿನಲ್ಲಿ ವೇದಿಕೆಯನ್ನು ಸಿದ್ಧಪಡಿಸಿ ಬಗೆಹರಿಸೋಣವೆಂದರೆ ಕಾನೂನು ಪಾಲನೆಯ ಶಾಂತಿ ಕದಡುವ ಸಂದರ್ಭದ ನೆಪದಿಂದ ಇದ್ದ ಅವಕಾಶವನ್ನೂ ಕೈತಪ್ಪಿಸಲಾಯಿತು.

ಇದೀಗ ಇನ್ನೊಬ್ಬ ಸಾಹಿತಿ-ಬುದ್ಧಿಜೀವಿ ವ್ಯಕ್ತಿ ತಾನೂ ಒಂದು ಪುಸ್ತಕ ಬರೆದಿದ್ದು, 'ಭಗವದ್ಗೀತೆಗೆ ನಮಸ್ಕಾರ' ಎಂದು ಹೇಳುತ್ತಾ ಅದೇ ಕೃತಿಯಲ್ಲಿ ನಮ್ಮ ಶ್ರದ್ಧಾ ವಿಷಯಗಳ ಕುರಿತು ಪ್ರಶ್ನೆಗಳನ್ನು ಇಡುತ್ತಿದ್ದಾರೆ. ಅವುಗಳಿಗೆ ಸಾಮರ್ಥ್ಯ ಉಳ್ಳವರು ಉತ್ತರಿಸಬೇಕೆಂದೂ ಪಂಥಾಹ್ವಾನ ನೀಡಿದ್ದಾರೆ. ಇವರೆಲ್ಲ 'ವಿಚಾರಪ್ರಿಯರಲ್ಲ - ಪ್ರಚಾರಪ್ರಿಯರು'. ವಿಚಾರ ಪ್ರಿಯರೇ ಆಗಿದ್ದರೆ, ಸಂಪನ್ಮೂಲ ವ್ಯಕ್ತಿಗಳಲ್ಲಿ ಅಥವಾ ವಿದ್ವಾಂಸರೊಂದಿಗೆ ಚರ್ಚಿಸಿ ತಿಳಿದುಕೊಳ್ಳಬಹುದಾದ ಇಂತಹ ಧಾರ್ಮಿಕ ಸೂಕ್ಷ್ಮಗಳನ್ನು ತಮ್ಮ ನಾಲಿಗೆಯ ಚಪಲಕ್ಕೋಸ್ಕರ ಜನರ ಧಾರ್ಮಿಕ ನಂಬಿಕೆಗಳನ್ನು, ಭಾವನೆಗಳನ್ನು ಪ್ರಶ್ನಿಸುವ ದುಸ್ಸಾಹಸ ಮಾಡುತ್ತಿರಲಿಲ್ಲ.

ಇವರಿಗೆ ನನ್ನದೊಂದು ಪ್ರಶ್ನೆ. ಇದೇ ದುಸ್ಸಾಹಸವನ್ನು ಇವರು ಇತರ ಧರ್ಮಗಳಲ್ಲಿನ ನ್ಯೂನತೆಗಳ ಬಗ್ಗೆ ಟೀಕಿಸಬಲ್ಲರೇ? ಅವರ ಧಾರ್ಮಿಕ ಗ್ರಂಥಗಳ ಬಗ್ಗೆಯೂ ಹಗುರವಾಗಿ ಮಾತಾಡಿ ಜೀರ್ಣಿಸಿಕೊಳ್ಳಬಲ್ಲರೇ? ಪುಸ್ತಕಗಳನ್ನು ಬರೆಯಬಲ್ಲರೇ? ಸಹಿಷ್ಣುತೆಯನ್ನೇ ಮೈಗೂಡಿಸಿಕೊಂಡು ಆನೆಯಂತೆ ಗಾಂಭೀರ್ಯದಿಂದ ನಡೆಯುತ್ತಿರುವ ಹಿಂದೂ ಧರ್ಮವನ್ನು ಬೀದಿ ಬದಿಯ ಶ್ವಾನಗಳು ಹೆದರಿಸಿದಂತೆ ಅನ್ನಿಸುತ್ತಿದೆ ಅಲ್ಲವೇ...?

– ಎಂ.ಮಾಧವಾಚಾರ್

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ.ಎನ್.ಎಸ್.ಸುಬ್ಬಣ್ಣ – ಬೆಂಗಳೂರು

ಶ್ರೀ.ಎಮ್.ಎಸ್.ತ್ರಿನೇಶ್ ಗೌಡ – ಮಂಡ್ಯ

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ.ವಿ.ಚಿಕ್ಕವಿರೇಗೌಡ –ಸಿದ್ದರಾಮನಹುಂಡಿಮೈಸೂರು

ಶ್ರೀ.ಎನ್.ಬಿ.ರಾಜಪ್ಪ – ಬೆಂಗಳೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ. ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ



KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ

110 ಶ್ರೀ. ಆರ್.ಎನ್.
ದೇಸಾಯಿ
ಶಿಕ್ಷಕರು, #79/ಎ,
ಬಸವೇಶ್ವರ
ದೇವಸ್ಥಾನಹತ್ತಿರ,
ಜಾಲಮಂಗಲ ರಸ್ತೆ,
ಹನುಮಂತನಗರ
ರಾಮನಗರ ಟೌನ್,
ರಾಮನಗರ

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237